# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಜುಲೈ 01, 2024

ಸಂಪುಟ : 51 ಸಂಚಿಕೆ : 48 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಸೂಡಾನ್‌ನಲ್ಲಿ ಸೈನ್ಯ - ಅರೆಸೇನೆಯ ಸಂಘರ್ಷ ; ಕ್ಷಾಮದ ಅಂಚಿಗೆ ದೇಶ

ಕೈರೋ, ಜೂ. 30 – ಸೂಡಾನ್‌ನ ಸೈನ್ಯ ಹಾಗೂ ಅರೆಸೇನಾ ಪಡೆಗಳ ನಡುವೆ ಮಧ್ಯ ಪ್ರಾಂತ್ಯವೊಂದರಲ್ಲಿ ಸಂಘರ್ಷ ಭುಗಿಲೆದ್ದಿದೆ. ಇದರೊಂದಿಗೆ 14 ತಿಂಗಳ ಅಂತರ್ಯುದ್ಧ ಹೊಸ ಸ್ವರೂಪ ಪಡೆದುಕೊಂಡಿದೆ. ಆಫ್ರಿಕಾದ ದೇಶವಾದ ಸೂಡಾನ್ ಈಗ ಕ್ಷಾಮದ ಅಂಚಿಗೆ ಬಂದು ನಿಂತಿದೆ.

ಅರೆಸೇನಾ ಪಡೆಗಳು ಸೆನ್ನರ್ ಪ್ರಾಂತ್ಯದಲ್ಲಿ ದಾಳಿ ಆರಂಭಿಸಿವೆ. ಅರೆ ಸೇನಾ ಪಡೆಗಳು ಪ್ರಾಂತ್ಯದ ರಾಜಧಾನಿ ಸಿಂಗಾ ಕಡೆಗೆ ತೆರಳುತ್ತಿವೆ.

ಸಿಂಗಾದಲ್ಲಿರುವ ಸೈನ್ಯದ 17ನೇ ಪದಾತಿ ದಳದ ಕೇಂದ್ರಗಳನ್ನು ವಶಪಡಿಸಿಕೊಂಡಿರುವುದಾಗಿಯೂ ಅರೆಸೇನಾಪಡೆಗಳು ತಿಳಿಸಿದ್ದವು.

ಆದರೆ, ಈ ಕೇಂದ್ರವನ್ನು ಮರು ವಶಪಡಿಸಿಕೊಂಡಿರುವುದಾಗಿ ಸೈನ್ಯದ ವಕ್ತಾರ ಬ್ರಿಗೇಡಿಯರ್ ನಬಿಲ್ ಅಬ್ದುಲ್ಲಾ ಹೇಳಿದ್ದಾರೆ. ಭಾನುವಾರ ಬೆಳಿಗ್ಗೆಯಿಂದಲೂ ಸಂಘರ್ಷ ನಡೆಯುತ್ತಿದೆ.



ಈ ಸಂಘರ್ಷದಿಂದಾಗಿ ಲಕ್ಷಾಂತರ ಜನರು ಕ್ಷಾಮದ ಭೀತಿ ಎದುರಿಸುತ್ತಿದ್ದಾರೆ. ಸೂಡನ್ ಸಂಘರ್ಷದಲ್ಲಿ ತೊಡಗಿರುವವರು ಜನರ ಬಳಲುವಿಕೆಯನ್ನೇ ಅಸ್ತ್ರ ಮಾಡಿಕೊಂಡಿದ್ದಾರೆ ಎಂದು ವಿಶ್ವಸಂಸ್ಥೆಯ ಸ್ವತಂತ್ರ ಪರಿಣಿತರು ಆರೋಪಿಸಿದ್ದಾರೆ. ಸಿಂಗಾದಲ್ಲಿ ಅರೆಸೇನಾ ಪಡೆಗಳು ವ್ಯಾಪಕವಾಗಿ ಲೂಟಿ ನಡೆಸಿವೆ. ಖಾಸಗಿ ವಾಹನ, ಮೊಬೈಲ್ ಫೋನ್, ಆಭರಣ ಹಾಗೂ ಇತರೆ ಅಮೂಲ್ಯ ವಸ್ತುಗಳನ್ನು ಕಸಿದುಕೊಳ್ಳುತ್ತಿದ್ದಾರೆ ಎಂದು ಸ್ಥಳೀಯರು ಹೇಳಿದ್ದಾರೆ. ರಾಜಧಾನಿ ಖಿರ್ತೌಮ್ ಹಾಗೂ ಇತರೆ ನಗರಗಳಲ್ಲಿ ಲೂಟಿ ಮಾಡಿರುವ ರೀತಿಯಲ್ಲೇ ಇಲ್ಲೂ ವರ್ತಿಸುತ್ತಿದ್ದಾರೆ. ಹಲವರು ಸಾವನ್ನಪ್ಪಿದ್ದಾರೆ, ಇನ್ನು ಹಲವರು ಗಾಯಗೊಂಡಿದ್ದಾರೆ ಎಂದು ಬ್ಲೂ ನೈಲ್‌ಗೆ ಪಲಾಯನ ಮಾಡಿರುವ ಸಿಂಗಾ ನಿವಾಸಿ ಅಬ್ದೆಲ್ ರಹಮಾನ್ ಅಲ್ ತಾಜ್ ಹೇಳಿದ್ದಾರೆ.

ಆಸ್ಪತ್ರೆ ಮೇಲೆ ದಾಳಿ ನಡೆಸಿರುವ ಅರೆಸೇನಾ ಪಡೆ, ಅಲ್ಲಿನ ರೋಗಿಗಳು ಹಾಗೂ ಸಿಬ್ಬಂದಿಯನ್ನು ಮಾನವ ಗೋಡೆಯಾಗಿ ಬಳಸಿಕೊಳ್ಳುತ್ತಿದೆ ಎಂದೂ ಹೇಳಲಾಗುತ್ತಿದೆ.

ಸಂಘರ್ಷ ಆರಂಭವಾದ ನಂತರ 1.10 ಕೋಟಿ ಜನರು ಮನೆ ಬಿಟ್ಟು ಪಲಾಯನ ಮಾಡಿದ್ದಾರೆ. 7.55 ಲಕ್ಷ ಜನ ಕ್ಷಾಮದ ಪರಿಸ್ಥಿತಿ ಎದುರಿಸುತ್ತಿದ್ದಾರೆ. 85 ಲಕ್ಷ ಜನರು ಆಹಾರದ ತೀವ್ರ ಕೊರತೆ ಎದುರಿಸುತ್ತಿದ್ದಾರೆ ಎಂದು ವರದಿಗಳು ತಿಳಿಸಿವೆ.

## ಬ್ರಿಟೀಷ್ ಕಾಯ್ದೆಗಳಿಗೆ ತೆರೆ

### ಇಂದಿನಿಂದ ನೂತನ ಅಪರಾಧಿಕ ಕಾಯ್ದೆಗಳು ಜಾರಿ

ನವದೆಹಲಿ, ಜೂ. 30 - ಭಾರತದ ಅಪರಾಧಿಕ ನ್ಯಾಯ ವ್ಯವಸ್ಥೆಯಲ್ಲಿ ಹೊಸ ಬದಲಾವಣೆ ತರುವ ಹಾಗೂ ಬ್ರಿಟಿಷರ ಕಾಲದ ಕಾಯ್ದೆಗಳಿಗೆ ತೆರೆ ಎಳೆಯುವ ಮೂರು ನೂತನ ಅಪರಾಧ ಕಾಯ್ದೆಗಳು ಸೋಮವಾರದಿಂದ ಜಾರಿಗೆ ಬರಲಿವೆ.

ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮಗಳು ಜಾರಿಗೆ ಬರಲಿವೆ. ಬ್ರಿಟಿಷರ ಕಾಲದ ಇಂಡಿಯನ್ ಪೀನಲ್ ಕೋಡ್, ಸಿ.ಆರ್.ಪಿ.ಸಿ. ಹಾಗೂ ಇಂಡಿಯನ್ ಎವಿಡೆನ್ಸ್ ಆಕ್ಟ್‌ಗಳಿಗೆ ತೆರೆ ಬೀಳಲಿದೆ.

ನೂತನ ಕಾಯ್ದೆಗಳಿಂದ ನ್ಯಾಯಿಕ ವ್ಯವಸ್ಥೆಯಲ್ಲಿ ಆಧುನೀಕರಣ, ಶೂನ್ಯ ಎಫ್.ಐ.ಆರ್., ಆನ್‌ಲೈನ್ ಮೂಲಕ ದೂರು ದಾಖಲು, ಎಸ್.ಎಂ.ಎಸ್. ರೀತಿಯ ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ಸಮನ್ಸ್ ಹಾಗೂ ಗಂಭೀರ ಅಪರಾಧ ಸ್ಥಳದ ಕಡ್ಡಾಯ ವಿಡಿಯೋಗ್ರಫಿಯಂತಹ ನಿಯಮಗಳು ಜಾರಿಗೆ ಬರಲಿವೆ.

ಸಂವಿಧಾನದಲ್ಲಿರುವ ಆದರ್ಶಗಳಿಗೆ ಅನುಗುಣವಾಗಿ ಈಗಿನ ಸಾಮಾಜಿಕ ವಾಸ್ತವತೆಯನ್ನು ಬಿಂಬಿಸುವ ರೀತಿಯಲ್ಲಿ ಹೊಸ ಕಾಯ್ದೆಗಳನ್ನು ರೂಪಿಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಬ್ರಿಟಿಷರ ಕಾಯ್ದೆಗಳು ದಂಡ ವಿಧಿಸುವುದಕ್ಕೆ ಆದ್ಯತೆ ನೀಡುತ್ತಿದ್ದವು. ನೂತನ ಕಾಯ್ದೆಗಳು ನ್ಯಾಯಕ್ಕೆ ಆದ್ಯತೆ ನೀಡುತ್ತವೆ ಎಂದು ಮಸೂದೆಗಳನ್ನು ಮಂಡಿಸುವಾಗ ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದ್ದರು.

ಈ ಕಾಯ್ದೆಗಳನ್ನು ಭಾರತೀಯರು, ಭಾರತೀಯರಿಗಾಗಿ ಹಾಗೂ ಭಾರತೀಯ ಸಂಸತ್ತಿನ ಮೂಲಕ ರೂಪಿಸಿದ್ದಾರೆ. ಇದರಿಂದ ವಸಾಹತುಶಾಹಿ ಕಾಲದ ಅಪರಾಧ ನ್ಯಾಯ ಕಾಯ್ದೆಗಳಿಗೆ ತೆರೆ ಬೀಳಲಿದೆ ಎಂದವರು ಹೇಳಿದರು.

- ಸಂಘಟಿತ ಅಪರಾಧ ಹಾಗೂ ಉಗ್ರವಾದ ಕೃತ್ಯಗಳನ್ನು ವ್ಯಾಖ್ಯಾನ
- ದಾಳಿ ಮತ್ತು ವಶದ ಸಂದರ್ಭದಲ್ಲಿ ವಿಡಿಯೋ ಚಿತ್ರೀಕರಣ ಕಡ್ಡಾಯ
- 511 ಸೆಕ್ಷನ್‌ಗಳ ಸಂಖ್ಯೆ ಈಗ 358ಕ್ಕೆ ಇಳಿಕೆ
- ಜೀರೋ ಎಫ್.ಐ.ಆರ್. ವ್ಯವಸ್ಥೆ ಆರಂಭ
- ಬಂಧನದ ಸಂದರ್ಭದಲ್ಲಿ ವ್ಯಕ್ತಿಗಳು ತಮಗೆ ಬೇಕಾದ ವ್ಯಕ್ತಿಗೆ ಮಾಹಿತಿ ನೀಡುವುದಕ್ಕೆ ಅವಕಾಶ.
- ಗಂಭೀರ ಅಪರಾಧ ಸ್ಥಳಗಳಿಗೆ ವಿಧಿ ವಿಜ್ಞಾನ ಪರಿಣಿತರು ಭೇಟಿ ನೀಡಿ ಸಾಕ್ಷಿ ಸಂಗ್ರಹಿಸುವುದು ಕಡ್ಡಾಯ
- ಸಂತ್ರಸ್ತರಿಗೆ ಪ್ರಕರಣದಲ್ಲಿ ಆಗಿರುವ ಬೆಳವಣಿಗೆಗಳ ಬಗ್ಗೆ 90 ದಿನಗಳಿಗೊಮ್ಮೆ ಮಾಹಿತಿ ನೀಡುವುದು ಕಡ್ಡಾಯ
- ವಿದ್ಯುನ್ಮಾನ ಮಾರ್ಗದ ಮೂಲಕ ಸಮನ್ಸ್ ಕಳಿಸಲು ಅವಕಾಶ

ಈ ಕಾಯ್ದೆಗಳು ಕೇವಲ ಹೆಸರು ಬದಲಿಸುವ ಉದ್ದೇಶದ್ದಲ್ಲ. ಇವು ಸಂಪೂರ್ಣ ಬದಲಾವಣೆಯ ಉದ್ದೇಶದ್ದು. ನೂತನ ಕಾಯ್ದೆಗಳ ಆತ್ಮ, ದೇಹ ಹಾಗೂ ಚೈತನ್ಯ ಸಂಪೂರ್ಣ ಭಾರತೀಯವಾಗಿದೆ ಎಂದು ಅಮಿತ್ ಷಾ ಹೇಳಿದ್ದರು.

ಸಂತ್ರಸ್ತ ಹಾಗೂ ದೋಷಿ ಇಬ್ಬರಿಗೂ ನ್ಯಾಯ ಸಿಗಬೇಕು. ನೂತನ ಕಾಯ್ದೆಗಳು ಭಾರತೀಯ ನೈತಿಕತೆಯೊಂದಿಗೆ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ನ್ಯಾಯ ಹೊಂದಿವೆ ಎಂದೂ ಅವರು ಹೇಳಿದ್ದರು. ನೂತನ ಕಾಯ್ದೆಗಳ ಅನ್ವಯ ಅಪರಾಧಿಕ ಪ್ರಕರಣಗಳಲ್ಲಿ ವಿಚಾರಣೆ ಪೂರ್ಣಗೊಂಡ 45 ದಿನಗಳಲ್ಲಿ ತೀರ್ಪು ಬರಬೇಕಿದೆ. ಮೊದಲ ವಿಚಾರಣೆ ನಡೆದ 60 ದಿನಗಳಲ್ಲಿ ಆರೋಪ ಪಟ್ಟಿ ದಾಖಲಿಸಬೇಕಿದೆ.

ಅತ್ಯಾಚಾರ ಸಂತ್ರಸ್ತರ ಹೇಳಿಕೆಗಳನ್ನು ಮಹಿಳಾ ಪೊಲೀಸ್ ಅಧಿಕಾರಿಯ ಉಪಸ್ಥಿತಿಯಲ್ಲಿ ಅವರ ಪೋಷಕರು ಇಲ್ಲವೇ ಸಂಬಂಧಿಗಳ ಉಪಸ್ಥಿತಿಯಲ್ಲಿ ದಾಖಲಿಸಿಕೊಳ್ಳಬೇಕು. ಏಳು ದಿನಗಳಲ್ಲಿ ವೈದ್ಯಕೀಯ ವರದಿಗಳನ್ನು ರೂಪಿಸಬೇಕು.

ಸಂಘಟಿತ ಅಪರಾಧ ಹಾಗೂ ಉಗ್ರವಾದ ಕೃತ್ಯಗಳನ್ನು ವ್ಯಾಖ್ಯಾನಿಸಲಾಗಿದೆ (2ನೇ ಪುಟಕ್ಕೆ)

## ಭಾರತೀಯ ತಂಡಕ್ಕೆ ಬಿಸಿಸಿಐನಿಂದ 125 ಕೋಟಿ ರೂ. ಬಹುಮಾನ

ನವದೆಹಲಿ ಜೂ. 30 – ಟಿ20 ವಿಶ್ವಕಪ್‌ನಲ್ಲಿ ಭಾರತೀಯ ತಂಡದ ಸಾಧನೆಗೆ ಪ್ರಶಂಸಿಸಿರುವ ಬಿ.ಸಿ.ಸಿ.ಐ. ಕಾರ್ಯದರ್ಶಿ ಜಯ್ ಷಾ, ತಂಡಕ್ಕೆ 125 ಕೋಟಿ ರೂ.ಗಳ ಬಹುಮಾನ ಪ್ರಕಟಿಸಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧ ಏಳು ರನ್‌ಗಳ ಗೆಲುವು ಸಾಧಿಸಿದ್ದ ಭಾರತ, ಎರಡನೇ ಬಾರಿ ಟಿ20 ವಿಶ್ವಕಪ್ ತನ್ನದಾಗಿಸಿಕೊಂಡಿತ್ತು.

ರೋಹಿತ್ ಶರ್ಮ ಅವರ ಅಪ್ರತಿಮ ನಾಯಕತ್ವದಲ್ಲಿ ತಂಡ ಸ್ಮರಣಾರ್ಹ ದೃಢತೆ ಹಾಗೂ ಬದ್ಧತೆಯ ಪ್ರದರ್ಶನ ನೀಡಿದೆ. ಇದೇ ಮೊದಲ ಬಾರಿಗೆ ಟಿ20 ವಿಶ್ವಕಪ್‌ನಲ್ಲಿ ಅಜೇಯವಾಗಿ (5ನೇ ಪುಟಕ್ಕೆ)

## ಮೀಸಲಾತಿ ಶೇ.50 ದಾಟಿಸಲು ಕಾಯ್ದೆ : ಕಾಂಗ್ರೆಸ್ ಆಗ್ರಹ

ನವದೆಹಲಿ, ಜೂ. 30 - ಮೀಸಲಾತಿಯ ಮಿತಿಯನ್ನು ಶೇ.50ಕ್ಕಿಂತ ಹೆಚ್ಚಿಸಲು ಕೇಂದ್ರ ಸರ್ಕಾರ ಕಾಯ್ದೆ ಜಾರಿಗೆ ತರಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ. ಕೇಂದ್ರದ ಆಡಳಿತಾರೂಢ ಎನ್.ಡಿ.ಎ. ಮೈತ್ರಿಕೂಟದ ಅಂಗಪಕ್ಷವಾದ ಜೆಡಿಯು ಸಹ ಇದೇ ರೀತಿಯ ಒತ್ತಾಯ ಮಾಡಿತ್ತು.

ಪಾಟ್ನಾ ಹೈಕೋರ್ಟ್ ಇತ್ತೀಚೆಗೆ ಬಿಹಾರ ಸರ್ಕಾರದ ಮೀಸಲಾತಿ ಹೆಚ್ಚಳ ಕಾಯ್ದೆಯನ್ನು ತಳ್ಳಿ ಹಾಕಿತ್ತು. ರಾಜ್ಯ ಸರ್ಕಾರ ಮೀಸಲಾತಿಯನ್ನು ಶೇ.50ರಿಂದ 65ಕ್ಕೆ ಹೆಚ್ಚಿಸಿತ್ತು.

ಕೇಂದ್ರ ಸರ್ಕಾರದ ಬಿಹಾರದ ಮೀಸಲಾತಿ ಹೆಚ್ಚಳದ ಮಸೂದೆಯನ್ನು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಬೇಕು ಎಂದು (5ನೇ ಪುಟಕ್ಕೆ)

## ಲೋಕಸಭಾ ಚುನಾವಣೆಯಲ್ಲಿ ಪ್ರಜಾಪ್ರಭುತ್ವಕ್ಕೆ ಜನರ ಬದ್ಧತೆ



ನವದೆಹಲಿ ಜೂ. 30 - ದೇಶದ ಜನರು 2024ರ ಲೋಕಸಭಾ ಚುನಾವಣೆಯಲ್ಲಿ ಭಾಗವಹಿಸುವ ಮೂಲಕ ಪ್ರಜಾಸತ್ತಾತ್ಮಕ ವ್ಯವಸ್ಥೆ ಹಾಗೂ ಸಂವಿಧಾನದ ಬಗ್ಗೆ ತಮ್ಮ ಅಚಲ ಬದ್ಧತೆ ಪುನರುಚ್ಚರಿಸಿದ್ದಾರೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಮಾಸಿಕ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಸಂವಿಧಾನ ಹಾಗೂ ಪ್ರಜಾಸತ್ತಾತ್ಮಕ ವ್ಯವಸ್ಥೆ ಬಗ್ಗೆ ಅಚಲ ಬದ್ಧತೆ ತೋರಿರುವ ಜನತೆಗೆ ಧನ್ಯವಾದ ಸಲ್ಲಿಸುವುದಾಗಿ ಹೇಳಿದರು. ಲೋಕಸಭಾ ಚುನಾವಣೆಯ (5ನೇ ಪುಟಕ್ಕೆ)

## ನೀಟ್, ಅಗ್ನಿಪಥ್ ಯೋಜನೆ ಸಂಸತ್ತಿನಲ್ಲಿ ಇಂದು ಪ್ರಸ್ತಾಪ

ನವದೆಹಲಿ, ಜೂ. 30 - ಸೋಮವಾರ ಸಂಸತ್ ಅಧಿವೇಶನ ಪುನರಾರಂಭವಾಗಲಿದ್ದು ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ, ಅಗ್ನಿಪಥ್ ಯೋಜನೆ ಹಾಗೂ ಹಣದುಬ್ಬರಗಳ ಕುರಿತು ಚರ್ಚೆಗಳು ನಡೆಯುವ ನಿರೀಕ್ಷೆ ಇದೆ.

ಪ್ರಶ್ನೆಪತ್ರಿಕೆ ಸೋರಿಕೆಯ ಜೊತೆಗೆ ಪ್ರತಿಪಕ್ಷಗಳು ನಿರುದ್ಯೋಗದ ವಿಷಯ ಸಹ ಪ್ರಸ್ತಾಪಿಸುವ ಸಾಧ್ಯತೆ ಇದೆ.

ಲೋಕಸಭೆಯಲ್ಲಿ ಬಿಜೆಪಿ ಸದಸ್ಯ ಹಾಗೂ ಮಾಜಿ ಸಚಿವ ಅನುರಾಗ್ ಠಾಕೂರ್ ಅವರು ರಾಷ್ಟ್ರಪತಿ ಭಾಷಣಕ್ಕೆ ಧನ್ಯವಾದ ಸಲ್ಲಿಸುವ ನಿಲುವಳಿ ಕುರಿತ ಚರ್ಚೆ ಆರಂಭಿಸಲಿದ್ದಾರೆ. ಬಿಜೆಪಿ ಹಿರಿಯ ನಾಯಕಿ ದಿವಂಗತ ಸುಷ್ಮಾ ಸ್ವರಾಜ್ ಅವರ ಪುತ್ರಿ ಹಾಗೂ ಮೊದಲ ಬಾರಿ ಲೋಕಸಭಾ ಸದಸ್ಯೆಯಾಗಿರುವ ಬಾನ್ಸುರಿ ಸ್ವರಾಜ್ ಅವರು ಚರ್ಚೆಗೆ ಅನುಮೋದಿಸಲಿದ್ದಾರೆ.

ಧನ್ಯವಾದ ಸಲ್ಲಿಸುವ ನಿಲುವಳಿ ಕುರಿತ ಚರ್ಚೆಗಾಗಿ 16 ಗಂಟೆಗಳನ್ನು ಕಾಯ್ದಿರಿಸಲಾಗಿದೆ. ಇದರಲ್ಲಿ ಪ್ರಧಾನ ಮಂತ್ರಿ ನರೇಂದ್ರ (2ನೇ ಪುಟಕ್ಕೆ)

## ಗೃಹಲಕ್ಷ್ಮಿ ಯೋಜನೆ ಸ್ಥಗಿತ ಇಲ್ಲ, ಆತಂಕ ಬೇಡ

### ಆನಗೋಡಿನ ಜನಸ್ಪಂದನದಲ್ಲಿ ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ



ದಾವಣಗೆರೆ, ಜೂ.30- ಐದು ಗ್ಯಾರಂಟಿಗಳನ್ನು ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ. ಮಹಿಳೆಯರು ಪ್ರತಿಪಕ್ಷಗಳು ಹಬ್ಬಿಸುವ ವದಂತಿಗಳಿಗೆ ಕಿವಿಗೊಡಬೇಡಿ. ನಮ್ಮ ಸರ್ಕಾರ ನುಡಿದಂತೆ ನಡೆದುಕೊಳ್ಳುತ್ತದೆ ಎಂದು ಶಾಸಕ ಕೆ.ಎಸ್.ಬಸವಂತಪ್ಪ ಭರವಸೆ ನೀಡಿದರು.

ತಾಲ್ಲೂಕಿನ ಆನಗೋಡು ಗ್ರಾಮದಲ್ಲಿ ಭಾನುವಾರ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಜನಸ್ಪಂದನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಎರಡು ತಿಂಗಳು ಕಳೆಯಿತು, ಸರ್ಕಾರ ಇನ್ನೂ ಗೃಹಲಕ್ಷ್ಮಿ ಹಣವನ್ನು ಮಹಿಳಾ ಫಲಾನುಭವಿಗಳ ಖಾತೆಗೆ ಹಾಕಲಿಲ್ಲ. ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದುಕೊಳ್ಳದೇ ವಚನ ಭ್ರಷ್ಟ ಸರ್ಕಾರವಾಗಿದೆ ಎಂದು ಪ್ರತಿಪಕ್ಷಗಳು ಆರೋಪಿಸುತ್ತಿವೆ. ಯಾವುದೇ ಕಾರಣಕ್ಕೂ ಗೃಹಲಕ್ಷ್ಮಿ ಯೋಜನೆ ರದ್ದುಗೊಳಿಸುವುದಿಲ್ಲ. ಕೆಲವು ತಾಂತ್ರಿಕ ತೊಂದರೆಯಿಂದ ವಿಳಂಬವಾಗಿರಬಹುದು. ಸರ್ಕಾರ ಜಾರಿಗೊಳಿಸಿದ ಗ್ಯಾರಂಟಿಗಳನ್ನು ನಿಲ್ಲಿಸುವುದಿಲ್ಲ. ಇನ್ನೆರಡು, ಮೂರು ದಿನಗಳಲ್ಲಿ ಮಹಿಳಾ ಫಲಾನುಭವಿಗಳ ಖಾತೆಗೆ ಗೃಹಲಕ್ಷ್ಮಿ ಹಣ ಹಾಕುವುದಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದ್ದಾರೆ. ಹೀಗಾಗಿ ಮಾತೆಯರು ಆತಂಕಕ್ಕೆ ಒಳಗಾಗುವುದು ಬೇಡ ಎಂದರು.

ಹೆಚ್ಚು ಆದಾಯ ಇರುವ ಕೆಲವು ಮಹಿಳೆಯರು ಯೋಜನೆ ಆರಂಭದಲ್ಲಿಯೇ ಗೃಹಲಕ್ಷ್ಮೀ ಯೋಜನೆಯ ಹಣವನ್ನು ಸರ್ಕಾರಕ್ಕೆ ಹಿಂದಿರುಗಿಸಿದ್ದಾರೆ. ಅದೇ ರೀತಿ ಆದಾಯ ಹೆಚ್ಚಿರುವ ಉಳಿದವರೂ ಸಹ ಹಣ ಹಿಂತಿರುಗಿಸಿದರೆ ಬಡ ಮಹಿಳೆಯರಿಗೆ ಸಹಾಯವಾಗಲಿದೆ ಎಂದರು.

ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ಗ್ರಾಮಗಳಲ್ಲಿ ಇರುವ ಸರ್ಕಾರಿ ಜಮೀನು ಗುರುತಿಸಿದರೆ, ವಸತಿ ರಹಿತರಿಗೆ ವಸತಿ ಸೌಲಭ್ಯ ಕಲ್ಪಿಸಲು ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲೆಲ್ಲಿ ಜಾಗ ಇದೆ, ಅವುಗಳನ್ನು ಗುರುತಿಸುವಂತೆ ಈಗಾಗಲೇ ತಹಸೀಲ್ದಾರ್‌ಗೆ ಸೂಚನೆ ನೀಡಲಾಗಿದೆ.

ಅಲ್ಲದೇ, ಬಗರ್ ಹುಕುಂ ಸಾಗುವಳಿದಾರರಿಗೆ ಸಾಗುವಳಿ ಚೀಟಿ ನೀಡಲಾಗಿದೆ. ಆದರೆ, ಆರ್ಥಿಕವಾಗಿ ಸಬಲರಾಗಿರುವಂತವರು ಹೆಚ್ಚು ಭೂಮಿ ಹೊಂದಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿವೆ. ತಹಸೀಲ್ದಾರ್ ಸಾಗುವಳಿ ಪಡೆದವರಲ್ಲಿ ಯಾರು ಹೆಚ್ಚಿನ ಭೂಮಿ ಹೊಂದಿದ್ದಾರೆ, ಅಂತಹವರನ್ನು ಪತ್ತೆ ಹಚ್ಚಿ ಭೂಮಿ ಇಲ್ಲದ ಬಡವನಿಗೆ ಭೂಮಿಯ ಹಕ್ಕು ನೀಡುವ ಕೆಲಸ ಮಾಡಬೇಕು ಎಂದು ತಹಸೀಲ್ದಾರ್‌ಗೆ (5ನೇ ಪುಟಕ್ಕೆ)

## ಭದ್ರಾ ಮೇಲ್ದಂಡೆ ಚುರುಕಿಗೆ ಸೂಚನೆ



ದಾವಣಗೆರೆ, ಜು. 30 - ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಇಂದು ತಮ್ಮ ಗೃಹ ಕಚೇರಿಯಲ್ಲಿ ವಿಶ್ವೇಶ್ವರಯ್ಯ ಜಲ ನಿಗಮದ ಅಧಿಕಾರಿಗಳ ಜೊತೆಗೆ ಸಭೆ ನಡೆಸಿ ಪ್ರಗತಿಯ ಮಾಹಿತಿ ಪಡೆದರು. ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಅಡಿ ಸಮರ್ಪಕ ನೀರು ಸರಬರಾಜು ಮಾಡುವಂತೆ ಅಧಿಕಾರಿಗಳಿಗೆ ಸಂಸದರು ತಿಳಿಸಿದರು.

ಕಾಮಗಾರಿಗೆ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿರುವ ಬಗ್ಗೆ ಮಾಹಿತಿ ಪಡೆದುಕೊಂಡ ಸಂಸದರು ಅನುದಾನ ಲಭಿಸದಿದ್ದಲ್ಲಿ ನಮ್ಮ (5ನೇ ಪುಟಕ್ಕೆ)

## ಸ್ಮಾರ್ಟ್ ಸಿಟಿ ಯೋಜನೆ ಅವಧಿ ವಿಸ್ತರಣೆ

ಹೈದರಾಬಾದ್, ಜೂ. 30 – ಸ್ಮಾರ್ಟ್ ಸಿಟಿ ಯೋಜನೆಯನ್ನು ಕೇಂದ್ರ ಸರ್ಕಾರ ಮಾರ್ಚ್ 31, 2025ರವರೆಗೆ ವಿಸ್ತರಿಸಿದೆ ಎಂದು ತೆಲಂಗಾಣದ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರ ಕಚೇರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆಂಧ್ರ ಪ್ರದೇಶದ ವಾರಂಗಲ್ ಹಾಗೂ ಕರೀಂನಗರದಲ್ಲಿನ ಕೆಲ ಸ್ಮಾರ್ಟ್ ಸಿಟಿ ಯೋಜನೆಗಳು ಇನ್ನೂ ಪೂರ್ಣಗೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿ ಯೋಜನೆಯನ್ನು ವಿಸ್ತರಿಸುವಂತೆ ರೆಡ್ಡಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದರು. ಈ ಬಗ್ಗೆ ರಾಜ್ಯಗಳಿಗೆ ಪತ್ರ ಬರೆದಿರುವ ಕೇಂದ್ರ ಸರ್ಕಾರ, ಸ್ಮಾರ್ಟ್ ಸಿಟಿ ಯೋಜನೆಯನ್ನು ಮಾರ್ಚ್ 31, (2ನೇ ಪುಟಕ್ಕೆ)

## ಒತ್ತಡಕ್ಕೆ ಮಣಿದು ತಪ್ಪು ಮಾಡದಿರಿ

### ಯಲವಟ್ಟಿಯಲ್ಲಿ ಜನಸ್ಪಂದನದಲ್ಲಿ ಅಧಿಕಾರಿಗಳಿಗೆ ಶಾಸಕ ಹರೀಶ್ ಎಚ್ಚರಿಕೆ



**ಬೇಜವಾಬ್ದಾರಿ ಸರಿಪಡಿಸಿಕೊಳದಿದ್ದರೆ ಹಕ್ಕುಚ್ಯುತಿ ಸಮಿತಿಗೆ ದೂರು**

ಮಲೇಬೆನ್ನೂರು, ಜೂ. 30- ಅಧಿಕಾರಿಗಳು ಬೇರೆಯವರ ಒತ್ತಡಕ್ಕೆ ಮಣಿದು ತಪ್ಪು ಮಾಡಿದರೆ ಮುಂದೆ ನಿಮ್ಮನ್ನು ಉಳಿಸಲು ಯಾರೂ ಬರಲ್ಲ. ತಪ್ಪು ಮಾಡಿದರೆ ನನ್ನನ್ನೂ ಸೇರಿ ಯಾರಿಗೂ ಉಳಿಗಾಲ ಇಲ್ಲ ಎಂದು ಶಾಸಕ ಬಿ.ಪಿ. ಹರೀಶ್ ಅಧಿಕಾರಿಗಳನ್ನು ಎಚ್ಚರಿಸಿದರು.

ಯಲವಟ್ಟಿ ಗ್ರಾಮದ ಶ್ರೀ ಗುರು ಸಿದ್ಧಾಶ್ರಮದಲ್ಲಿ ಹರಿಹರ ತಾಲ್ಲೂಕು ಆಡಳಿತದಿಂದ ನಿನ್ನೆ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ಜನಸ್ಪಂದನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ರಾಜಕೀಯ ಮುಖಂಡರು ಮತ್ತು ಸಿನಿಮಾ ನಟರು ಅನುಭವಿಸುತ್ತಿರುವ ಶಿಕ್ಷೆಯನ್ನು ಅಧಿಕಾರಿಗಳು ಅರ್ಥ ಮಾಡಿಕೊಳ್ಳಬೇಕು. ಚಿಕ್ಕಬಿದರಿ ಬಳಿ ಜಿಲ್ಲೆಯ ಗಡಿಭಾಗದಲ್ಲಿ ಹಳ್ಳ-ಕೊಳ್ಳಗಳನ್ನು ಕಬಳಿಸುತ್ತಿರುವುದನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ನಿರ್ಲಕ್ಷ್ಯ ಮಾಡುತ್ತಿದ್ದೀರಿ. ಇದು ಎಂತಹ ಅಪರಾಧವೆಂದು ನಿಮಗೆ ಬಿಸಿ ಮುಟ್ಟಿಸುತ್ತೇನೆ. ನನಗೇ ಈ ರೀತಿ ಮಾಡುವ ಅಧಿಕಾರಿಗಳು ಸಾಮಾನ್ಯ ಜನರನ್ನು ಯಾವ ರೀತಿ ನಡೆಸಿಕೊಳ್ಳಬಹುದೆಂದು ಊಹಿಸಿಕೊಂಡರೆ ತುಂಬಾ ಬೇಸರವಾಗುತ್ತಿದೆ. ಅಧಿಕಾರಿಗಳು ತಮ್ಮ ಬೇಜವಾಬ್ದಾರಿತನವನ್ನು ಸರಿಪಡಿಸಿಕೊಳ್ಳದಿದ್ದರೆ ಹಕ್ಕುಚ್ಯುತಿ ಸಮಿತಿಗೆ ದೂರು ನೀಡುವುದಾಗಿ ಹರೀಶ್ ಎಚ್ಚರಿಸಿದರು.

ಮಲೇಬೆನ್ನೂರಿನಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಾಣಕ್ಕಾಗಿ ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದಾರೆಂದು ಪುರಸಭೆ ಮುಖ್ಯಾಧಿಕಾರಿಗಳು ಯಾರನ್ನೂ ವಿಶ್ವಾಸಕ್ಕೆ (5ನೇ ಪುಟಕ್ಕೆ)

## ಡಾ. ಎ.ಬಿ. ಪರಮೇಶ್ವರಪ್ಪ ನಿಧನ

**(ನಿವೃತ್ತ ಪ್ರಾಂಶುಪಾಲರು, ಎಂ.ಎಸ್.ಬಿ. ಕಾಲೇಜ್)**



ದಾವಣಗೆರೆ ವಿದ್ಯಾನಗರ ವಾಸಿ ಎಂ.ಎಸ್.ಬಿ. ಕಾಲೇಜ್‌ನ ನಿವೃತ್ತ ಪಾಂಶುಪಾಲರಾದ **ಡಾ. ಎ.ಬಿ. ಪರಮೇಶ್ವರಪ್ಪ** ಅವರು ದಿನಾಂಕ 30-06-2024ರ ಭಾನುವಾರ ರಾತ್ರಿ 10.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 79 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 01-07-2024ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಹಳೇಬಾತಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತರು :


ಪತ್ನಿ : ಶ್ರೀಮತಿ ಲಲಿತಮ್ಮ ಪರಮೇಶ್ವರಪ್ಪ

ಪುತ್ರರು : ಎ.ಪಿ. ಸುರೇಂದ್ರ, ಎ.ಪಿ. ಸತೀಶ್‌ಚಂದ್ರ

ಶ್ರೀಮತಿ ಮಂಜಮ್ಮ, ಎ.ಬಿ. ರೇವಣಸಿದ್ದಪ್ಪ ಮತ್ತು ಮಕ್ಕಳು, ಆವರಗೆರೆ ಮತ್ತು ಸೊಸೆಯಂದಿರು, ಮೊಮ್ಮಕ್ಕಳು ಹಾಗು ಬಂಧು-ಮಿತ್ರರು.

ಹಳೇಬಾತಿ ಆಗಸನಕಟ್ಟೆ ವಂಶಸ್ಥರು. ಮೊ. : 9686765150, 9980822722


**Best Wishes**



**SRI H.T. SUDHINDRA RAO & TEAM**

*for having been elected as the Board of Director of*

Davangere District Tax Practitioner Association (R.), Davangere *By*

- CA Sri Rajesh Kumar T.R. Bangalore
- CA Sri Jatin Anil christopher, Bangalore
- CA Smt. Annapurna Kabra, Bangalore
- CA Sri Naveen Raj Purohit, Bangalore

# ಅಲ್ಪ ಅಂತರ್ಜಲ ಜಾಗಕ್ಕೆ ಖುಷ್ಕಿ ತೋಟಗಾರಿಕೆ ವರದಾನ




**ಜಗಳೂರು ತಾಲ್ಲೂಕಿನ ಕಲ್ಲೇದೇವರಪುರ ಗ್ರಾಮದಲ್ಲಿನ 'ಖುಷ್ಕಿ ತೋಟಗಾರಿಕೆ' ತರಬೇತಿ ಕಾರ್ಯಕ್ರಮದಲ್ಲಿ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ**

ಜಗಳೂರು, ಜೂ.30- ಅಂತರ್ಜಲ ಕಡಿಮೆಯಿರುವ ಜಾಗದಲ್ಲಿ ಖುಷ್ಕಿ ತೋಟಗಾರಿಕೆ ವರದಾನವಾಗಿದೆ ಎಂದು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ.ಜಿ. ಬಸವನಗೌಡ ಅಭಿಪ್ರಾಯಪಟ್ಟರು.

ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಐಸಿಎಆರ್-ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲ ಬ್ಯೂರೋದ ಆಶ್ರಯದಲ್ಲಿ ತಾಲ್ಲೂಕಿನ ಕಲ್ಲೇದೇವರಪುರ ಗ್ರಾಮದಲ್ಲಿ ನಡೆದ 'ಖುಷ್ಕಿ ತೋಟಗಾರಿಕೆ' ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅತೀ ಕಡಿಮೆ ನೀರು ಬೇಕಾಗುವ ಬೆಳೆಗಳಾದ ಮಾವು, ಸೀಬೆ, ಸಪೋಟಾ, ತೆಂಗು ಬೆಳೆಗಳನ್ನು ಖುಷ್ಕಿ ಬೇಸಾಯದಲ್ಲಿ ಅಳವಡಿಸಿಕೊಂಡರೆ ಬರಗಾಲದಲ್ಲೂ ಆರ್ಥಿಕ ಸಬಲತೆ ಹೊಂದಬಹುದು ಎಂದರು.

ಜಗಳೂರಿನಲ್ಲಿ ಪ್ರಸ್ತುತ ಅಡಿಕೆ ಬೆಳೆಯ ವಿಸ್ತೀರ್ಣ ಹೆಚ್ಚಾಗುತ್ತಿರುವುದು ಆತಂಕದ ಸಂಗತಿಯಾಗಿದ್ದು, ಬೋರ್‌ವೆಲ್ ಆಶ್ರಯದಲ್ಲಿ ತೋಟ ನಿರ್ವಹಣೆ ಕಷ್ಟ ಸಾಧ್ಯ. ಹಾಗಾಗಿ ರೈತರು ಅಡಿಕೆ ಬೆಳೆಗಷ್ಟೇ ಮಾರು ಹೋಗದೆ ಇತರೆ ಹಣ್ಣಿನ ಬೆಳೆ ಬೆಳೆಯಲು ಮನಸ್ಸು ಮಾಡಬೇಕೆಂದು ಕಿವಿಮಾತು ಹೇಳಿದರು.

ಕೇಂದ್ರದ ಸಸ್ಯ ಸಂರಕ್ಷಣಾ ವಿಜ್ಞಾನಿ ಡಾ.ಟಿ.ಜಿ. ಅವಿನಾಶ್ ಮಾತನಾಡಿ, ಪ್ರಸ್ತುತ ಮೆಕ್ಕೆಜೋಳ ಬೆಳೆಗೆ ಮಳೆ ಕೊರತೆಯಿಂದ ಲದ್ದಿ ಹುಳದ ಬಾಧೆ ಅಲ್ಲಲ್ಲಿ ಕಂಡು ಬಂದಿದ್ದು, ಅದರ ನಿರ್ವಹಣೆಗೆ 'ಇಮಾಮೆಕ್ಟಿನ್ ಬೆಂಜೋಯೇಟ್' ಅನ್ನು ಪ್ರತಿ ಲೀಟರ್ ನೀರಿಗೆ 0.4ಗ್ರಾಂ ಬೆರೆಸಿ ಸಿಂಪಡಿಸಬೇಕೆಂದು ಸಲಹೆ ನೀಡಿದರು.

ಪರಿಶಿಷ್ಟ ಪಂಗಡ ಉಪಯೋಜನೆಯಡಿ ಆಯ್ದ 20 ಜನ ರೈತರಿಗೆ ಅರಸೀಕೆರೆ ಎತ್ತರದ ತೆಂಗಿನ ಸಸಿ ವಿತರಿಸಿದರು.

ಬಿದರಕೆರೆ ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿಯ ನಿರ್ದೇಶಕ ಕೃಷ್ಣ ಮೂರ್ತಿ, ರೈತರಾದ ಶಶಿಧರ, ಮೇಘನಾಥ್, ಅಶೋಕ, ತಿಪ್ಪೇಸ್ವಾಮಿ ಮತ್ತು ಇತರರಿದ್ದರು.

# ಸಂಸ್ಕೃತದ ಸಮಷ್ಠಿ ಪ್ರಯತ್ನಕ್ಕೆ ಪ್ರಧಾನಿ ಪ್ರಶಂಸೆ



ಬೆಂಗಳೂರು, ಜೂ. 30 - ಸಂಸ್ಕೃತ ಭಾಷೆ ಜನಪ್ರಿಯಗೊಳಿಸಲು ಬೆಂಗಳೂರಿನ ಸಮಷ್ಠಿ ಗುಬ್ಬಿ ನಡೆಸುತ್ತಿರುವ ಪ್ರಯತ್ನವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಪ್ರಶಂಸಿಸಿದ್ದಾರೆ.

ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ, ಗುಬ್ಬಿ ಅವರು ಸಂಸ್ಕೃತ ಭಾಷೆಯನ್ನು ಜನಪ್ರಿಯಗೊಳಿಸಲು ಪ್ರಯತ್ನ ನಡೆಸುತ್ತಿರುವುದನ್ನು ಪ್ರಸ್ತಾಪಿಸಿದರು.

ಭಾರತದ ಪುರಾತನ ಜ್ಞಾನ ಹಾಗೂ ವಿಜ್ಞಾನ ಸಂರಕ್ಷಿಸುವಲ್ಲಿ ಸಂಸ್ಕೃತ ದೊಡ್ಡ ಪಾತ್ರ ವಹಿಸಿದೆ ಎಂದು ಮೋದಿ ಹೇಳಿದ್ದರು.

ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಪ್ರತಿ ಭಾನುವಾರ ಮಕ್ಕಳಿಂದ ಹಿಡಿದು ಹಿರಿಯವರೆಗೆ ಹಲವರು ಸಂಸ್ಕೃತ ಕಲಿಯಲು ಸೇರುತ್ತಿದ್ದಾರೆ. ಸಮಷ್ಠಿ ಗುಬ್ಬಿ ಅವರು ವೆಬ್‌ಸೈಟ್ ಮೂಲಕ ಸಂಸ್ಕೃತ ಅಭಿಯಾನ ಆರಂಭಿಸಿ ದ್ದಾರೆ ಎಂದು ಹೇಳಿದ್ದರು. ಪ್ರಧಾನಿ ತಮ್ಮ ಪ್ರಯತ್ನದ ಬಗ್ಗೆ ಪ್ರಸ್ತಾಪಿಸಿರುವುದಕ್ಕೆ ಹರ್ಷಗೊಂಡಿರುವ ಗುಬ್ಬಿ, ಪ್ರಧಾನಿ ನಮ್ಮ ಪ್ರಯತ್ನಗಳಿಗೆ ಪ್ರಶಂಸಿಸಿರುವುದು ಸಂತಸದ ಕ್ಷಣ ಎಂದಿದ್ದಾರೆ.

ಸಂಸ್ಕೃತದಲ್ಲಿ ಎ.ಂಎ. ಪಡೆದಿರುವ ಗುಬ್ಬಿ, ಹಲವಾರು ವರ್ಷಗಳಿಂದ ಸಂಸ್ಕೃತ ಜನಪ್ರಿಯಗೊಳಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಇದಕ್ಕಾಗಿ sthaayi.in ಎಂಬ ವೆಬ್ ತಾಣವನ್ನೂ ಆರಂಭಿಸಿದ್ದಾರೆ. ಬಾಲಿವುಡ್ ಹಾಗೂ ಕನ್ನಡ ಚಲನಚಿತ್ರದ ಹಾಡುಗಳನ್ನು ಸಂಸ್ಕೃತಕ್ಕೆ ಅನುವಾದಿಸಿ ಹಾಡುತ್ತಿರುವುದಾಗಿಯೂ ಗುಬ್ಬಿ ಹೇಳಿದ್ದಾರೆ. ಕಬ್ಬನ್ ಪಾರ್ಕ್‌ನಲ್ಲಿ ಪ್ರತಿ ವಾರಾಂತ್ಯದ ಸಂಸ್ಕೃತ ಸಭೆಯಲ್ಲಿ 800ರಿಂದ 900 ಜನ ಭಾಗವಹಿಸುತ್ತಿದ್ದಾರೆ ಎಂದೂ ಅವರು ಹೇಳಿದ್ದಾರೆ.

# ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಉದಾಸೀನ ಬೇಡ



**ಭರಮಸಾಗರ**

ಭರಮಸಾಗರ, ಜೂ.30- ಅಲ್ಪಸಂಖ್ಯಾತರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಉದಾಸೀನ ಮಾಡದೇ ಸರ್ಕಾರ ಒದಗಿಸಿದ ಸೌಲಭ್ಯವನ್ನು ತಪ್ಪದೇ ಬಳಸಿಕೊಳ್ಳಬೇಕೆಂದು ಚಿತ್ರದುರ್ಗದ ಮೈನಾರಿಟಿ ಇಲಾಖೆಯ ಅಧಿಕಾರಿ ಕಾಂತರಾಜ್ ಹೇಳಿದರು.

ಇಲ್ಲಿನ ಮಸೀದಿಯ ಪ್ರಾರ್ಥನಾ ಸಭಾಂಗಣದಲ್ಲಿ ವಕ್ಫ್ ಬೋರ್ಡ್ ಅಲ್ಪಸಂಖ್ಯಾತ ಇಲಾಖೆಯಿಂದ ದೊರೆಯುವ ಸೌಲಭ್ಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುಸ್ಲಿಂ ಸಮಾಜದವರು ಸರ್ಕಾರದಿಂದ ಅನುಕೂಲ ಪಡೆಯಬೇಕೆಂದರೆ, ವಕ್ಫ್ ಬೋರ್ಡ್ ಹಾಗೂ ಸಂಬಂಧಪಟ್ಟ ಇಲಾಖೆಯಲ್ಲಿ ನೋಂದಣಿ ಕಡ್ಡಾಯ ಎಂದು ಹೇಳಿದರು.

ಚಿತ್ರದುರ್ಗ ವಕ್ಫ್ ಬೋರ್ಡಿನ ಸಲಹಾ ಸಮಿತಿಯ ಸದಸ್ಯ ಎಂ.ಸಿ. ಬಾಬು ಸಾಬ್ ಮಾತನಾಡಿ, ವಕ್ಫ್ ಬೋರ್ಡಿನಿಂದ ಸೌಲಭ್ಯ ಪಡೆಯುವ ಬಗ್ಗೆ ಮಾಹಿತಿ ವಿನಿಮಯ ಮಾಡಿದರು ಮತ್ತು ಹೆಚ್ಚು ಆಸ್ತಿ ಹೊಂದಿದ ಸಮಾಜ ಬಾಂಧವರು ದಾನ ನೀಡುವಂತೆ ಹೇಳಿದರು.

ಹಿರಿಯ ಪತ್ರಕರ್ತ ಬಿ.ಜೆ ಅನಂತಪದ್ಮನಾಭ ರಾವ್ ಮಾತನಾಡಿ, ಇಸ್ಲಾಂ ಸಮಾಜದವರು ದುಡಿಮೆ ಮಾಡುವುದರಲ್ಲಿ ಜಾಣರು ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಕಮಿಟಿಯ ಮಹಮ್ಮದ್ ಸೈಫುಲ್ಲಾ, ಚಕ್ಕೆ ಬಶೀರ್ ಸಾಬ್, ಬುಡೇನ್ ಸಾಬ್, ನಯಾಜ್ ಅಹಮದ್ ಸಾಬ್, ಬಿ.ಕೆ. ಪರ್ವೀಸ್, ಅಲ್ಲಾಭಕ್ಷಿ ಮಾತನಾಡಿದರು. ಶಮೀಮ್ ಪಾಷಾ ಪ್ರಾಸ್ತಾವಿಕ ಮಾತನಾಡಿದರು. ಸಮಿತಿಯ ಕಾರ್ಯದರ್ಶಿ ಚಕ್ಕೆ ಸಮೀರ್ ವಂದಿಸಿದರು.



# ಹರಪನಹಳ್ಳಿ : ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ

ಹರಪನಹಳ್ಳಿ, ಜೂ. 30- ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾಮಗಾರಿಗಳಿಗೆ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಅವರು ಭೂಮಿ ಪೂಜೆ ನೆರವೇರಿಸಿದರು.

ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ 300 ಮೆಟ್ರಿಕ್ ಟನ್ ಸಾಮರ್ಥ್ಯದ ಗೋಡಾನ್ ಹಾಗೂ ಹರಾಜು ಕಟ್ಟೆ ನಿರ್ಮಾಣ. ಪುರಸಭೆ ವತಿಯಿಂದ ಪಟ್ಟಣದಲ್ಲಿ ಸಾರ್ವಜನಿಕ ಶೌಚಾಲಯ. ತಾಲ್ಲೂಕಿನ ತಿಪ್ಪನಾಯಕನಹಳ್ಳಿ ಗ್ರಾಮದ ದುರ್ಗಮ್ಮನ ದೇವಸ್ಥಾನದಿಂದ ಸ್ಮಶಾನದ ರಸ್ತೆವರೆಗೆ ಬಾಕ್ಸ್ ಚರಂಡಿ ನಿರ್ಮಾಣ.

ತಾಲ್ಲೂಕಿನ ಕೆ.ಕಲ್ಲಹಳ್ಳಿ ಗ್ರಾಮದಲ್ಲಿ 2022-23ನೇ ಸಾಲಿನ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ನಿರ್ಮಿಸಲಾದ ಭಾರತ್ ನಿರ್ಮಾಣ ಸೇವಾ ಕೇಂದ್ರದ ನೂತನ ಕಟ್ಟಡದ ಉದ್ಘಾಟನೆಯನ್ನು ಅವರು ನೆರವೇರಿಸಿದರು.

ಬಾಪೂಜಿ ನಗರದಲ್ಲಿ ಸಿಸಿ ರಸ್ತೆ ನಿರ್ಮಾಣ. ಉದ್ಗಟ್ಟಿ ಗ್ರಾಮದಲ್ಲಿ ಸಿಸಿ ರಸ್ತೆ ಮಾಡ್ಲಗೇರಿ ತಾಂಡಾದಲ್ಲಿ ಬಾಕ್ಸ್ ಚರಂಡಿ ನಿರ್ಮಾಣ. ಬಾಗಳಿ ಗ್ರಾಮದಲ್ಲಿ ಸಂತೆ ಮೈದಾನ. ನಂದಿಬೇವೂರು ತಾಂಡಾ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ, ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ, ತಹಶೀಲ್ದಾರ್ ಗಿರೀಶ್‌ಬಾಬು, ಪಿಎಸ್‌ಐ ಶಂಭುಲಿಂಗಯ್ಯ ಹಿರೇಮಠ್, ಪುರಸಭೆ ಸದಸ್ಯ ಲಾಟಿ ದಾದಾಪೀರ್, ಮುಖಂಡರಾದ ಇಸ್ಮಾಯಿಲ್ ಎಲಿಗಾರ್. ಮೈದೂರು ರಾಮಣ್ಣ, ಸನಾವುಲ್ಲಾ, ಎಲ್.ಮಂಜಾನಾಯ್ಕ. ಉಮಾ ಶಂಕರ್, ಕವಿತ ಸುರೇಶ ಇತರರು ಇದ್ದರು.

# ಬಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ



ದಾವಣಗೆರೆ, ಜೂ. 30- ಕ್ಷತ್ರಿಯ ಮರಾಠ ವಿದ್ಯಾ ಮತ್ತು ಕಲ್ಯಾಣಾಭಿವೃದ್ಧಿ ಟ್ರಸ್ಟ್ ವತಿಯಿಂದ 2023-24ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ. 75 ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿ ಉತ್ತೀರ್ಣರಾದ ದಾವಣಗೆರೆ ನಗರ ವ್ಯಾಪ್ತಿಯಲ್ಲಿರುವ ಕ್ಷತ್ರಿಯ ಮರಾಠ ಸಮಾಜದ ಬಡ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ಧನ ನೀಡಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ಯಶವಂತರಾವ್ ಜಾಧವ್ ತಿಳಿಸಿದ್ದಾರೆ. ಅರ್ಹ ವಿದ್ಯಾರ್ಥಿನಿಯರು ಇಂದಿನಿಂದ ಬರುವ ಜುಲೈ 5ರವರೆಗೆ ಟ್ರಸ್ಟ್ ಅಧ್ಯಕ್ಷ ಯಶವಂತರಾವ್ ಜಾಧವ್ ಅವರ ಕಚೇರಿ, ಮಂಡಿಪೇಟೆಯ ರೇಣು ಪೇಂಟ್ಸ್, ಗಡಿಯಾರ ಕಂಬದ ಹತ್ತಿರ ಇರುವ ಊರ್ವಶಿ ಗಾರ್ಮೆಂಟ್ಸ್, ದೇವರಾಜ ಅರಸು ಬಡಾವಣೆಯ ಸಾವಂತ್ ಕಾಂಪ್ಲೆಕ್ಸ್ ಇಲ್ಲಿ ಅರ್ಜಿ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಜುಲೈ 10 ರ ಸಂಜೆ 5.30ರೊಳಗೆ ಸಂಘದ ಕಚೇರಿಗೆ ತಲುಪಿಸಬೇಕು.

ವಿವರಗಳಿಗೆ ಸಂಪರ್ಕಿಸಬೇಕಾದ ದೂ.ಸಂ : 94480 05060, 94485 89102, 94497 41211, 93425 14779.

## ಕಡ್ಲೇಬಾಳ್‌ನಲ್ಲಿ ಇಂದು

ದಾವಣಗೆರೆ ತಾಲ್ಲೂಕಿನ ಕಡ್ಲೇಬಾಳು ಗ್ರಾಮದ ಶ್ರೀ ಸದ್ಗುರು ಕೃಪಾ ಭವನ (ದೇವರಹಟ್ಟಿ)ದಲ್ಲಿ 'ಸದ್ಗುರುತ್ರಯರ ಮೂರ್ತಿ ಪ್ರತಿಷ್ಠಾಪನೆ' ಹಾಗೂ 'ಶ್ರೀ ಮಹಾ ರಾಜರ ದಿವ್ಯ ಸ್ಥಿರ ಪಾದುಕೆಗಳ ಪ್ರತಿಷ್ಠಾಪನಾ' ಕಾರ್ಯಕ್ರಮದ ಅಂಗವಾಗಿ ಇಂದು ಬೆಳಿಗ್ಗೆ 6ರಿಂದ ಭಜನೆ ಕಾರ್ಯಕ್ರಮ, 7.30ರಿಂದ ಮಧ್ಯಾಹ್ನ 12.30ರ ವರೆಗೆ ಹನುಮಾನ್ ಚಾಲೀಸಾ ಪಠಣ, ಮಧ್ಯಾಹ್ನ 12.30ರಿಂದ ಪ್ರವಚನ, 1.30ಕ್ಕೆ ಮಹಾ ಮಂಗಳಾರತಿ ಹಾಗೂ ಪ್ರಸಾದ ಸೇವೆ ನಡೆಯಲಿದೆ.

# ನೂತನ ಅಪರಾಧ ಕಾಯ್ದೆಗಳನ್ನು ಸ್ವಾಗತಿಸಬೇಕು : ಮುಖ್ಯ ನ್ಯಾಯಮೂರ್ತಿ

ಮುಂಬೈ, ಜೂ. 30 – ಬದಲಾವಣೆ ವಿರೋಧಿಸುವುದು ಮನುಷ್ಯ ಸಹಜ ಗುಣ. ಆದರೆ, ನೂತನವಾಗಿ ರೂಪಿಸಲಾದ ಅಪರಾಧ ಸಂಬಂಧದ ಕಾಯ್ದೆಗಳನ್ನು ಮುಕ್ತ ಮನೋಭಾವದಿಂದ ಸ್ವಾಗತಿಸಿ, ಜಾರಿಗೆ ತರಬೇಕಿದೆ ಎಂದು ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಉಪಾಧ್ಯಾಯ ಹೇಳಿದ್ದಾರೆ.

ಕೇಂದ್ರ ಕಾನೂನು ಹಾಗೂ ನ್ಯಾಯ ಸಚಿವಾಲಯ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ನ್ಯಾಯಮೂರ್ತಿ ಉಪಾಧ್ಯಾಯ, ಕಾನೂನು ಜಾರಿ ವಲಯದ ಸಂಸ್ಥೆಗಳು ನೂತನ ಕಾಯ್ದೆಗಳ ದಿಸೆಯಲ್ಲಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕಿದೆ ಎಂದರು.

ನಮ್ಮ ಸುರಕ್ಷಿತ ವಲಯದಿಂದ ಹೊರ ಬರಲು ಬಯಸದೇ ಇರುವುದು ಸಹಜವಾಗಿದೆ. ಅಜ್ಞಾತದ ಭಯ ದಿಂದಾಗಿ ನಾವು ಬದಲಾವಣೆಯನ್ನು ವಿರೋಧಿಸುತ್ತೇವೆ. ಇದರಿಂದ ನಮ್ಮ ತಾರ್ಕಿಕ ಚಿಂತನೆಗೆ ಹಿನ್ನಡೆಯಾಗುತ್ತದೆ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದರು.

ಸೋಮವಾರದಿಂದ ದೇಶಾದ್ಯಂತ ಮೂರು ನೂತನ ಅಪರಾಧ ಸಂಬಂಧದ ಕಾಯ್ದೆಗಳು ಜಾರಿಗೆ ಬರಲಿವೆ. ಇದರೊಂದಿಗೆ ವಸಹಾತುಶಾಹಿ ಕಾಲದ ಕಾಯ್ದೆಗಳಿಗೆ ತೆರೆ ಬೀಳಲಿದೆ. ನಾವು ಶತಮಾನದಷ್ಟು ಹಳೆಯ ಅಪರಾಧ ಕಾಯ್ದೆಗಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದೆವು. ಹೊಸ ಕಾಯ್ದೆಗಳು ಕೆಲ ಸವಾಲುಗಳನ್ನು ತಂದಿವೆ. ಆದರೆ, ಬದಲಾದ ಮನೋಭಾವದೊಂದಿಗೆ ಕಾಯ್ದೆಗಳನ್ನು ಸ್ವಾಗತಿಸಬೇಕಿದೆ ಎಂದವರು ಹೇಳಿದರು.

ಕಾನೂನು ಜಾರಿ ವಲಯಕ್ಕೆ ಸಂಬಂಧಿಸಿದ ಎಲ್ಲರೂ ಜೊತೆಯಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಹೊಸ ಕಾಯ್ದೆಗಳನ್ನು ಯಶಸ್ವಿಯಾಗಿ ಜಾರಿಗೆ ತರಲು ಸಾಧ್ಯ. ಹೊಸ ಕಾಯ್ದೆಗಳು ನ್ಯಾಯಾಂಗದ ವಿಳಂಬ ತಡೆಯಲು ಹಾಗೂ ಮಾಹಿತಿ ತಂತ್ರಜ್ಞಾನವನ್ನು ಬಳಸುವ ಉದ್ದೇಶ ಹೊಂದಿದೆ ಎಂದವರು ಹೇಳಿದರು.

# ಹಾಲಿನ ದರ ಹೆಚ್ಚಳ ವಿರೋಧಿಸಿ ನಗರದಲ್ಲಿ ಇಂದು ಬಿಜೆಪಿ ಪ್ರತಿಭಟನೆ

ದಾವಣಗೆರೆ, ಜೂ. 30- ಹಾಲಿನ ದರ ಹೆಚ್ಚಳ ವಿರೋಧಿಸಿ ನಾಳೆ ದಿನಾಂಕ 1 ರ ಸೋಮವಾರ ಬಿಜೆಪಿ ಜಿಲ್ಲಾ ಸಮಿತಿ ವತಿಯಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್ ಹಾಗೂ ಜಿಲ್ಲಾ ವಕ್ತಾರ ಬಿ.ಎಂ. ಸತೀಶ್ ಕೊಳೇನಹಳ್ಳಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯದಲ್ಲಿ ದಿನನಿತ್ಯ ಹಾಲಿನ ಉತ್ಪಾದನೆ ಒಂದು ಕೋಟಿ ಲೀಟರ್ ಸನಿಹದಲ್ಲಿದೆ ಎಂಬ ಕಾರಣದಿಂದ ಹಾಲಿನ ದರ ಹೆಚ್ಚಳ ಮಾಡಿರುವುದು ಹಾಸ್ಯಾಸ್ಪದವಾಗಿದೆ ಎಂದರು.

ಹಾಲು ಉತ್ಪಾದನೆ ಹೆಚ್ಚಾಗಿರುವುದರಿಂದ ಒಂದು ಲೀಟರ್ ಪ್ಯಾಕೇಟ್ ನಲ್ಲಿ 100 ಮಿ.ಲೀ. ಹೆಚ್ಚಿಸಿ, ಹಳೇ ದರಕ್ಕೆ ಮಾರಾಟ ಮಾಡಿದ್ದರೆ ಕ್ಷೀರಭಾಗ್ಯ ಎಂದು ಜನ ಕೊಂಡಾಡುತ್ತಿದ್ದರು. ಆದರೆ ಹಾಲಿನ ದರ ಹೆಚ್ಚಳ ಮಾಡಿರುವುದು ಜನ ವಿರೋಧಿಯಾಗಿದೆ ಎಂದು ಕಿಡಿ ಕಾರಿದರು.

ರಾಜ್ಯದಲ್ಲಿನ ಒಟ್ಟು 15 ಹಾಲು ಒಕ್ಕೂಟಗಳಲ್ಲಿ 798691 ಹಾಲು ಉತ್ಪಾದಕ ರೈತರಿದ್ದಾರೆ. ಇವರಿಗೆ ಆಗಸ್ಟ್ 2023 ರಿಂದ ಮಾರ್ಚ್ 2024 ರವರೆಗೆ ಒಟ್ಟು 8 ತಿಂಗಳ 1083 ಕೋಟಿ ರೂ. ಪ್ರೋತ್ಸಾಹ ಧನ ಬಾಕಿ ಇದೆ. ಆದರೆ ಏಪ್ರಿಲ್ ತಿಂಗಳ (2024) ಪ್ರೋತ್ಸಾಹ ಧನ 109 ಕೋಟಿ ರೂ. ಬಿಡುಗಡೆ ಮಾಡಿದೆ. 2023-24 ನೇ ಸಾಲಿನ ಪ್ರೋತ್ಸಾಹ ಧನ ಬಿಡುಗಡೆ ನೆನೆಗುದಿಗೆ ಬಿದ್ದಿದೆ. ಇದರಿಂದ ಹಾಲು ಉತ್ಪಾದಕರು ಸಂಕಷ್ಟಕ್ಕೀಡಾಗಿದ್ದಾರೆ. ಕೂಡಲೇ ಹಾಲಿನ ಪ್ರೋತ್ಸಾಹ ಧನ ಬಿಡುಗಡೆ ಮಾಡುವಂತೆ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಚಂದ್ರಶೇಖರ್ ಪೂಜಾರ್, ಬಾತಿ ಶಿವಕುಮಾರ್, ಶಿರಮಗೊಂಡನಹಳ್ಳಿ ಮಂಜುನಾಥ್, ಈಶ್ವರಪ್ಪ, ಮಂಜುನಾಥ ಉಪಸ್ಥಿತರಿದ್ದರು.

# ಮನೆಗೆ ಬೀಗ ಹಾಕಿಕೊಂಡು ಊರಿಗೆ ಹೋದಾಗ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿ : ಎಸ್ಪಿ



ದಾವಣಗೆರೆ, ಜೂ. 30- ಇಲ್ಲಿನ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಎಸ್ಪಿ ಉಮಾ ಪ್ರಶಾಂತ್ ಅಧ್ಯಕ್ಷತೆಯಲ್ಲಿ ಮಂಗಳವಾರ ಜನ ಸಂಪರ್ಕ ಸಭೆ ನಡೆಯಿತು. ಈ ವೇಳೆ ಮೊಬೈಲ್ ಕಳೆದುಕೊಂಡ ವಾರಸುದಾರರಿಗೆ ಮೊಬೈಲ್ ಹಿಂದಿರುಗಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಳೆದುಹೋದ ಮೊಬೈಲ್‌ಗಳ ಪೈಕಿ 260 ಮೊಬೈಲ್‌ಗಳನ್ನು ಸಿಇ ಐಆರ್ ಪೋರ್ಟಲ್ ಮೂಲಕ ಪತ್ತೆ ಮಾಡಿದ್ದು, 144 ಮೊಬೈಲ್ ಗಳನ್ನು ವಾರಸುದಾರರಿಗೆ ಹಿಂದಿರುಗಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಎಸ್ಪಿ ಉಮಾ ಪ್ರಶಾಂತ್, ಜಿಲ್ಲೆಯಲ್ಲಿ ಸಿಇಐಆರ್ ಪೋರ್ಟಲ್ ಆರಂಭವಾದಾಗಿನಿಂದ ಇಲ್ಲಿವರೆಗೆ 2968 ಮೊಬೈಲ್ ಗಳನ್ನು ಪತ್ತೆ ಹಚ್ಚಲಾಗಿದೆ. 1410 ಮೊಬೈಲ್ ಗಳನ್ನು ವಾರಸುದಾರರಿಗೆ ಹಿಂದಿರುಗಿಸಲಾಗಿದೆ ಎಂದರು.

ಚಿಕ್ಕಮಕ್ಕಳು ಗಾಡಿ ಓಡಿಸುವ ವಿಚಾರವಾಗಿ ಸ್ಪೇಷಲ್ ಡ್ರೈವ್ ಮಾಡಲಾಗುತ್ತಿದೆ. ಗಾಂಜಾ ಸೇವನೆ ಹಾಗೂ ಮಾರಾಟ ಮಾಡುವವರ ವಿರುದ್ದ ಜಿಲ್ಲೆಯಾದ್ಯಂತ ವಿಶೇಷ ಕಾರ್ಯಚರಣೆ ಕೈಗೊಂಡಿದ್ದು, ಈ ವರ್ಷ 70 ಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದರು.

ಮನೆಗೆ ಬೀಗ ಹಾಕಿಕೊಂಡು ಬೇರೆ ಊರಿಗೆ ಹೋದ ಸಮಯದಲ್ಲಿ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡುವ ಬಗ್ಗೆ ಸಾರ್ವಜನಿರಿಗೆ ಮಾಹಿತಿ ನೀಡಿದರು. ಪ್ರತಿ ಮನೆಯಲ್ಲಿ ಸಿಸಿ ಟಿವಿ ಅಳವಡಿಸಿಕೊಳ್ಳುವುದರಿಂದ ಅಪರಾಧಗಳನ್ನು ತಡೆಗಟ್ಟಲು ಹಾಗು ಆರೋಪಿಗಳನ್ನು ಪತ್ತೆ ಹಚ್ಚಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯಕುಮಾರ ಎಂ ಸಂತೋಷ್, ಕೆಟಿಜೆ ನಗರ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕ ಸುನೀಲ್ ಕುಮಾರ್, ಪಿಎಸ್‌ಐ ಸಾಗರ್ ಅತ್ತರವಾಲ್ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸ್ಮಾರ್ಟ್ ಸಿಟಿ ಯೋಜನೆ ಅವಧಿ ವಿಸ್ತರಣೆ

(1ನೇ ಪುಟದಿಂದ) 2025ರವರೆಗೆ ವಿಸ್ತರಿಸಿದೆ ಎಂದು ಮುಖ್ಯಮಂತ್ರಿ ಕಚೇರಿ ತಿಳಿಸಿದೆ.

ಜೂನ್ ಅಂತ್ಯದ ವೇಳೆಗೆ ಸ್ಮಾರ್ಟ್ ಸಿಟಿ ಯೋಜನೆ ಯನ್ನು ಪೂರ್ಣಗೊಳಿಸಲು ಕೇಂದ್ರ ಸರ್ಕಾರ ಈ ಹಿಂದೆ ಉದ್ದೇಶಿಸಿತ್ತು.

## ನೀಟ್, ಅಗ್ನಿಪಥ್ ಬಗ್ಗೆ ಪ್ರಸ್ತಾಪ

(1ನೇ ಪುಟದಿಂದ) ಮೋದಿ ಅವರು ದನ್ಯವಾದ ಸಲ್ಲಿಸುವುದೂ ಸೇರಿದೆ. ರಾಜ್ಯಸಭೆಯಲ್ಲಿ ಚರ್ಚೆಗಾಗಿ 21 ಗಂಟೆ ಸಮಯ ಮೀಸಲಿಡಲಾಗಿದೆ.

ಪ್ರಧಾನಿ ಮೋದಿ ಅವರು ಬುಧವಾರ ರಾಜ್ಯಸಭೆಯಲ್ಲಿ ಉತ್ತರಿಸಲಿದ್ದಾರೆ.

ನೀಟ್ ವಿಷಯಕ್ಕೆ ಸಂಬಂಧಿಸಿದಂತೆ ಸಂಸತ್ತಿನ ಉಭಯ ಸದನಗಳಲ್ಲಿ ಪ್ರತಿಪಕ್ಷಗಳು ತೀವ್ರ ಕೋಲಾಹಲ ನಡೆಸಿವೆ.

# ಬ್ರಿಟೀಷ್ ಕಾಯ್ದೆಗಳಿಗೆ ತೆರೆ

**(1ನೇ ಪುಟದಿಂದ)** ಹಾಗೂ ದಾಳಿ ಮತ್ತು ವಶದ ಸಂದರ್ಭದಲ್ಲಿ ವಿಡಿಯೋ ಚಿತ್ರೀಕರಣ ಕಡ್ಡಾಯವಾಗಿದೆ. ಮಹಿಳೆಯರು ಹಾಗೂ ಮಕ್ಕಳ ಮೇಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ಹೊಸ ಅಧ್ಯಾಯಗಳನ್ನು ಸೇರ್ಪಡೆ ಮಾಡಲಾಗಿದೆ. ಮಕ್ಕಳ ಮಾರಾಟ ಗಂಭೀರ ಅಪರಾಧವೆಂದು ಪರಿಗಣಿಸಲಾಗುವುದು. ಅಪ್ರಾಪ್ತರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಪ್ರಕರಣದಲ್ಲಿ ಮರಣ ದಂಡನೆಗೂ ಅವಕಾಶವಿದೆ.

ಹಲವಾರು ಸೆಕ್ಷನ್‌ಗಳನ್ನು ವಿಲೀನಗೊಳಿಸಲಾಗಿದೆ ಹಾಗೂ ಸರಳಗೊಳಿಸಲಾಗಿದೆ. ಇದರಿಂದಾಗಿ ಇಂಡಿಯನ್ ಪೀನಲ್ ಕೋಡ್‌ನಲ್ಲಿದ್ದ 511 ಸೆಕ್ಷನ್‌ಗಳ ಸಂಖ್ಯೆ ಈಗ 358ಕ್ಕೆ ಇಳಿಕೆಯಾಗಿದೆ ಎಂದು ಮೂಲಗಳು ತಿಳಿಸಿವೆ. ಕಲಂ 6ರಿಂದ 52ರವರೆಗೆ ಹರಡಿದ್ದ ಕಲಂಗಳನ್ನು ಈಗ ಒಂದೇ ಕಲಂ ಅಡಿ ತರಲಾಗಿದೆ. 18 ಕಲಂಗಳನ್ನು ವಾಪಸ್ ಪಡೆಯಲಾಗಿದೆ.

ಎಲೆಕ್ಟ್ರಾನಿಕ್ ಸಂಪರ್ಕದ ಮೂಲಕ ಘಟನೆಗಳ ಬಗ್ಗೆ ಜನರು ವರದಿ ನೀಡಲು ಅವಕಾಶ ಕಲ್ಪಿಸಲಾಗಿದೆ. ಇದರಿಂದಾಗಿ ಜನರು ಠಾಣೆಗೆ ಖುದ್ದು ಹಾಜರಾಗುವುದು ತಪ್ಪಲಿದೆ. ಇದರಿಂದಾಗಿ ಪೊಲೀಸರಿಗೆ ಸುಲಭವಾಗಿ ಹಾಗೂ ತ್ವರಿತವಾಗಿ ಮಾಹಿತಿ ನೀಡಲು ಸಾಧ್ಯವಾಗಲಿದೆ.

ಜೀರೋ ಎಫ್.ಐ.ಆರ್. ವ್ಯವಸ್ಥೆ ಆರಂಭಿಸಲಾಗಿದೆ. ಇದರಿಂದಾಗಿ ವ್ಯಕ್ತಿ ಯಾವುದೇ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದ್ದರೂ, ಯಾವುದೇ ಪೊಲೀಸ್ ಠಾಣೆಯಲ್ಲಿ ದೂರು ನೀಡಬಹುದು. ಇದರಿಂದಾಗಿ ಕಾನೂನು ಪ್ರಕ್ರಿಯೆ ವಿಳಂಬವಾಗುವುದು ತಪ್ಪಲಿದೆ.

ಬಂಧನದ ಸಂದರ್ಭದಲ್ಲಿ ವ್ಯಕ್ತಿಗಳು ತಮ್ಮ ಆಯ್ಕೆಯ ವ್ಯಕ್ತಿಗೆ ಮಾಹಿತಿ ನೀಡುವುದಕ್ಕೆ ಅವಕಾಶ ಕಲ್ಪಿಸಿರುವುದು ನೂತನ ಕಾಯ್ದೆಗಳ ವಿಶೇಷವಾಗಿದೆ. ಇದರಿಂದಾಗಿ ಬಂಧಿತ ವ್ಯಕ್ತಿಗಳು ತ್ವರಿತವಾಗಿ ನೆರವು ಪಡೆಯಲು ಸಾಧ್ಯವಾಗಲಿದೆ. ಅಲ್ಲದೇ ಬಂಧಿತರ ವಿವರಗಳನ್ನು ಪೊಲೀಸ್ ಠಾಣೆ ಹಾಗೂ ಜಿಲ್ಲಾ ಕೇಂದ್ರ ಕಚೇರಿಗಳಲ್ಲಿ ಪ್ರಮುಖವಾಗಿ ಪ್ರದರ್ಶಿಸಲಾಗುವುದು. ಇದರಿಂದಾಗಿ ಬಂಧಿತರ ಕುಟುಂಬದವರು ಹಾಗೂ ಸ್ನೇಹಿತರು ತ್ವರಿತವಾಗಿ ಮಾಹಿತಿ ಪಡೆಯಲು ಸಾಧ್ಯವಾಗಲಿದೆ.

ಗಂಭೀರ ಅಪರಾಧ ಸ್ಥಳಗಳಿಗೆ ವಿಧಿ ವಿಜ್ಞಾನ ಪರಿಣಿತರು ಭೇಟಿ ನೀಡಿ ಸಾಕ್ಷಿ ಸಂಗ್ರಹಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ನೂತನ ಕಾಯ್ದೆಗಳ ಅನ್ವಯ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಪ್ರಕರಣದಲ್ಲಿ ಆಗಿರುವ ಬೆಳವಣಿಗೆಗಳ ಬಗ್ಗೆ 90 ದಿನಗಳಿಗೊಮ್ಮೆ ಮಾಹಿತಿ ನೀಡುವುದು ಕಡ್ಡಾಯವಾಗಿದೆ.

ಮಹಿಳೆ ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಎಲ್ಲಾ ಆಸ್ಪತ್ರೆಗಳಲ್ಲಿ ಸಂತ್ರಸ್ತರಿಗೆ ಪ್ರಥಮ ಚಿಕಿತ್ಸೆ ಇಲ್ಲವೇ ವೈದ್ಯಕೀಯ ಚಿಕಿತ್ಸೆಯ ಗ್ಯಾರಂಟಿಯನ್ನೂ ಕಲ್ಪಿಸಲಾಗಿದೆ.

ಇನ್ನು ಮುಂದೆ ವಿದ್ಯುನ್ಮಾನ ಮಾರ್ಗದ ಮೂಲಕ ಸಮನ್ಸ್ ಕಳಿಸಲು ಅವಕಾಶ ಇರಲಿದೆ. ಇದರಿಂದ ಕಾನೂನು ಪ್ರಕ್ರಿಯೆ ತ್ವರಿತವಾಗಲಿದೆ. ಕಡತದ ಹೊರೆ ಕಡಿಮೆಯಾಗುವ ಜೊತೆಗೆ ಸಂಬಂಧಿಸಿದ ಎಲ್ಲರ ಜೊತೆ ದಕ್ಷವಾಗಿ ಸಂಪರ್ಕ ಸಾಧಿಸಲು ಸಾಧ್ಯವಾಗಲಿದೆ.

ಆರೋಪಿ ಹಾಗೂ ಸಂತ್ರಸ್ತರಿಬ್ಬರಿಗೂ 14 ದಿನಗಳಲ್ಲಿ ಎಫ್.ಐ.ಆರ್., ಪೊಲೀಸ್ ವರದಿ, ಆರೋಪಪಟ್ಟಿ, ಹೇಳಿಕೆ, ತಪ್ಪೊಪ್ಪಿಗೆ ಹಾಗೂ ಇತರೆ ದಾಖಲೆಗಳನ್ನು ಒದಗಿಸುವುದು ಕಡ್ಡಾಯವಾಗಿದೆ.

ಪ್ರಕರಣದ ವಿಚಾರಣೆಯಲ್ಲಿ ವಿಳಂಬವಾಗುವುದನ್ನು ತಪ್ಪಿಸಲು ನ್ಯಾಯಾಲಯಗಳು ಗರಿಷ್ಠ ಎರಡು ಬಾರಿ ವಿಚಾರಣೆ ಮುಂದೂಡಲು ಅವಕಾಶ ನೀಡಲಾಗುವುದು.

## ವೆಂಕಟೇಶ್ ಬಾಬುಗೆ ಪಿಎಚ್‌ಡಿ ಪದವಿ



ದಾವಣಗೆರೆ, ಜೂ.30- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಎಸ್. ವೆಂಕಟೇಶ್ ಬಾಬು ಅವರಿಗೆ ಮೈಸೂರು ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿ ನೀಡಿದೆ.

ಮೈಸೂರು ವಿವಿ ಜೆಎಸ್‌ಎಸ್ ಸಂಶೋಧನಾ ಕೇಂದ್ರದ ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಎಸ್. ಶಂಕ್ರಪ್ಪ ಅವರ ಮಾರ್ಗದರ್ಶನದಲ್ಲಿ 'ಪರ್ಫಾರ್ಮೆನ್ಸ್ ಇವ್ಯಾಲ್ಯೂಯೇಷನ್ ಆಫ್ ಡಿಜಿಟಲ್ ಪ್ರಿಂಟಿಂಗ್ ಅಂಡ್ ಪಬ್ಲಿಸಿಂಗ್ ಇಂಡಸ್ಟ್ರಿ ಇನ್ ಇಂಡಿಯಾ' ಎಂಬ ವಿಷಯದ ಕುರಿತು ಮಹಾ ಪ್ರಬಂಧವನ್ನು ಸಲ್ಲಿಸಿದ್ದರು. ಬಾಬು, ನಗರದ ದಿ. ಟಿ. ಶಿವಾನಂದ್ ಸೀತಿಮನಿ ಹಾಗೂ ಶಾಂತಮ್ಮ ದಂಪತಿ ಪುತ್ರ.

## ಜೋಸ್ ಅವರಿಗೆ ಕರಾಟೆ ಮಾಸ್ಟರ್ ಪ್ರಶಸ್ತಿ



ದಾವಣಗೆರೆ, ಜೂ. 30 - ರಾಜ್ಯ ಕರಾಟೆ ತೀರ್ಪುಗಾರರ ಆಯೋಗದ ಅಧ್ಯಕ್ಷ ಕೆ.ಪಿ. ಜೋಸ್ ಅವರು ದೇಶದ ಅತ್ಯುತ್ತಮ ಕರಾಟೆ ಮಾಸ್ಟರ್ ಪ್ರಶಸ್ತಿಯನ್ನು ಕೇರಳದಲ್ಲಿ ಪಡೆದಿದ್ದಾರೆ. ಇವರು ಕರಾಟೆಯಲ್ಲಿ ಸಲ್ಲಿಸಿದ ಸೇವೆಯನ್ನು ಗುರುತಿಸಿ 'ಇಂಟರ್‌ನ್ಯಾಷನಲ್ ಫೌಂಡೇಶನ್ ಆಫ್ ಎಂಪವರ್ ಮೆಂಟ್ ಸಂಸ್ಥೆಯು ಈ ಪ್ರಶಸ್ತಿ ನೀಡಿದೆ.

**ಗೌರವಾನ್ವಿತ ಮೂರನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆ.**

**ಆರ್.ಎ. ನಂ. 11/2022**

**ಅಫೀಲುದಾರರು :** 1). ಶ್ರೀ ಅಣ್ಣಪ್ಪ ಬಿನ್ ಯರಿಯಪ್ಪ ಹಂಚಿನಮನೆ ಯಾನೇ ಕರಿಯಪ್ಪ ವಯಸ್ಸು ಸುಮಾರು 47 ವರ್ಷ,
2) ಶ್ರೀ ಮಲ್ಲಪ್ಪ ಬಿನ್ ಯರಿಯಪ್ಪ ಹಂಚಿನಮನೆ ಯಾನೇ ಕರಿಯಪ್ಪ ವಯಸ್ಸು ಸುಮಾರು 66 ವರ್ಷ, ಇಬ್ಬರು ವ್ಯವಸಾಯ ವೃತ್ತಿ, ಇಬ್ಬರ ವಾಸ : ಕುಂದುವಾಡ ಗ್ರಾಮ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ, **- ವಿರುದ್ದ -**
**ಎದುರುದಾರರು :** 1) ಶ್ರೀಮತಿ ಶಾರದಮ್ಮ ಕೋಂ. ಲೇಟ್ ಶರಣಪ್ಪ ಮತ್ತು ಇತರೆಯವರು
4) ಶ್ರೀ ಬಸಪ್ಪ ಬಿನ್ ಲೇಟ್ ಯರಿಯಪ್ಪ ಹಂಚಿನಮನೆ ಯಾನೇ ಕರಿಯಪ್ಪ ಮೃತ ವಾರಸುದಾರರು
4) (ಇ) ಶ್ರೀಮತಿ ಲಕ್ಕಮ್ಮ ಯಾನೇ ಅಕ್ಕಮ್ಮ ಕೋಂ ಪೂಜಾರಿ ವೀರಪ್ಪ ಯಾನೇ ಬೀರಪ್ಪ, ವಯಸ್ಸು ಸುಮಾರು 40 ವರ್ಷ, ವಾಸ: ಕೋಡಿಯಾಲ ಹೊಸಪೇಟೆ, ರಾಣೇಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ.

**ಆದೇಶ-5 ನಿಯಮ-20 ರ ವ್ಯವಹಾರ ಪ್ರಕ್ರಿಯಾ ಸಂಹಿತೆ ಪ್ರಕಾರ ಎದುರುದಾರ ನಂ.4(ಇ) ರವರಿಗೆ ಸಮನ್ಸ್**

ಮೇಲ್ಕಂಡ ಮೇಲ್ಮನವಿಯನ್ನು ಎದುರುದಾರರುಗಳ ಮೇಲೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ್ದು, ಸದರಿ ಕೇಸಿನಲ್ಲಿ ಎದುರುದಾರ ನಂ.4 ಶ್ರೀ ಬಸಪ್ಪ ಬಿನ್ ಲೇಟ್ ಯರಿಯಪ್ಪ ಹಂಚಿನಮನೆ ಯಾನೇ ಕರಿಯಪ್ಪ ಮೃತರಾಗಿದ್ದು, ಅವರ ವಾರಸುದಾರರಾದ (4). (ಇ) ಶ್ರೀಮತಿ ಲಕ್ಕಮ್ಮ ಯಾನೇ ಅಕ್ಕಮ್ಮ ಕೋಂ ಪೂಜಾರಿ ವೀರಪ್ಪ ಯಾನೇ ಬೀರಪ್ಪ, ಇವರು ನ್ಯಾಯಾಲಯದ ನೋಟಿಸ್, ಸಮನ್ಸ್ ಮತ್ತು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ ನೋಟಿಸ್‌ಗಳನ್ನು ತೆಗೆದುಕೊಳ್ಳದೇ ತಪ್ಪಿಸಿಕೊಳ್ಳುತ್ತಿರುವುದರಿಂದ, ಘನ ನ್ಯಾಯಾಲಯವು ಪತ್ರಿಕಾ ಪ್ರಕಟಣೆಯ ಮೂಲಕ ಮೇಲ್ಕಾಣಿಸಿದ ಎದುರುದಾರ ನಂ.4 (ಇ) ರವರಿಗೆ ತಲುಪಿಸಲು ಆದೇಶಿಸಲಾಗಿದೆ.

ಘನ ನ್ಯಾಯಾಲಯ ಮೇಲ್ಕಾಣಿಸಿದ ಎದುರುದಾರರ ನಂ.4 (ಇ) ರವರ ಹಾಜರಾತಿಗಾಗಿ ದಿನಾಂಕ: 12/08/2024 ರಂದು ಮುದ್ದತ್ತು ನಿಗದಿಪಡಿಸಿರುತ್ತದೆ. ಆದ್ದರಿಂದ ಸದರಿ ತಾರೀಖಿನಂದು ನೀವು ಖುದ್ದಾಗಿಯಾಗಲೀ ಆಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಬೆಳಿಗ್ಗೆ 11-00 ಗಂಟೆಗೆ ಹಾಜರಾಗಿ ನಿಮ್ಮ ತಕರಾರು ಇದ್ದರೇ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಮೇಲ್ಕಂಡ ಅರ್ಜಿಯನ್ನು ನಿಮ್ಮ ವಿರುದ್ಧ ಏಕಪಕ್ಷಿಯವಾಗಿ ತೀರ್ಮಾನ ಮಾಡಲಾಗುವುದು.

ಘನ ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ: 29-06-2024 ರಂದು ನೀಡಲಾಗಿದೆ.

**ಎದುರುದಾರರ ಪರ ವಕೀಲರು**
**ಕೆ.ತಿಮ್ಮಪ್ಪ, ಹೆಚ್.ದಿವಾಕರ್,** ವಕೀಲರು, ದಾವಣಗೆರೆ.
ಸ್ಥಳ : ದಾವಣಗೆರೆ
ದಿನಾಂಕ : 29/06/2024

**ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೇದಾರರು,**
**ಘನ 3ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆ.**

### ಶಂಭುಲಿಂಗಪ್ಪ ಹಂಚಿನಮನೆ (ಕಟಿಗೆಳ್ಳಪ್ಪರ) ನಿಧನ



ದಾವಣಗೆರೆ ಹಳೇಕುಂದುವಾಡ ವಾಸಿ ಶಂಭುಲಿಂಗಪ್ಪ ಹಂಚಿನಮನೆ (95) ಇವರು ದಿನಾಂಕ 30.6.2024ರ ಭಾನುವಾರ ಸಂಜೆ 4 ಗಂಟೆಗೆ ನಿಧನರಾದರು. ಸಹೋದರ, ಸಹೋದರಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 1.7.2024ರ ಸೋಮವಾರ ಮಧ್ಯಾಹ್ನ 12 ಕ್ಕೆ ಹಳೇಕುಂದುವಾಡ ರುದ್ರಭೂಮಿಯಲ್ಲಿ ನೆವೇರಿಸಲಾಗುವುದು.

### ಶರಣ ರುದ್ರಪ್ಪ ನಿಧನ



ದಾವಣಗೆರೆ ತಾಲ್ಲೂಕು ಗುಮ್ಮನೂರು ವಾಸಿ ಶರಣ ರುದ್ರಪ್ಪ (52) ಇವರು ದಿನಾಂಕ 30.6.2024ರ ಭಾನುವಾರ ಸಂಜೆ 4 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು ಹಾಗೂ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 1.7.2024ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಗುಮ್ಮನೂರಿನಲ್ಲಿ ನೆರವೇರಿಸಲಾಗುವುದು.

### ಅಸಗೋಡು ಬಸವನಾಳ್ ಮಹಾದೇವಪ್ಪ ನಿಧನ



ಜಗಳೂರು ತಾಲ್ಲೂಕು ಅಸಗೋಡು ಗ್ರಾಮದ ವಾಸಿ ಬಸವನಾಳ್ ಮಹಾದೇವಪ್ಪ (67) ಅವರು ದಿನಾಂಕ : 30.6.24ರ ಭಾನುವಾರ ಸಂಜೆ 4.25ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 1.07.2024 ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಅಸಗೋಡು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

### ಆರ್.ಬಿ. ಶರಣ್ ಕುಮಾರ್ ನಿಧನ



ದಾವಣಗೆರೆ ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ ವಾಸಿ ಆರ್.ಬಿ. ಶರಣ್ ಕುಮಾರ್ (51) ಮಾಲೀಕರು, ಶ್ರೀ ಬಕ್ಕೇಶ್ವರ ಅಂಡ್ ಕೋ, ಕೆ.ಆರ್. ಮಾರ್ಕೆಟ್ ಇವರು ದಿನಾಂಕ : 30.6.2024ರ ಭಾನುವಾರ ಬೆಳಿಗ್ಗೆ 7.45ಕ್ಕೆ ನಿಧನರಾದರು. ಪತ್ನಿ, ತಂದೆ-ತಾಯಿ, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಶಾಮನೂರು ವೀರಶೈವ ರುದ್ರಭೂಮಿಯಲ್ಲಿ ದಿನಾಂಕ: 30.6.2024ರ ಭಾನುವಾರ ಸಂಜೆ 6 ಗಂಟೆಗೆ ನೆರವೇರಿಸಲಾಯಿತು.

# ಕಣ್ಣಿಗೆ ಕಾಣುವ ನಿಜವಾದ ದೇವರೆಂದರೆ ವೈದ್ಯರು...

'ಸದಾ ಜನರ ಸೇವೆಯಲ್ಲಿ ನಿರತರಾಗಿರುವ ಎಲ್ಲಾ ವೈದ್ಯ ಸಂಕುಲಕ್ಕೂ ಕರುಣಾ ಜೀವ ಕಲ್ಯಾಣ ಟ್ರಸ್ಟಿನ ವತಿಯಿಂದ ವೈದ್ಯರ ದಿನಾಚರಣೆಯ ಶುಭಾಶಯಗಳು' ವೈದ್ಯರೂ, ವೈದ್ಯರ ನಿರ್ಮಾತೃ ಶಿಕ್ಷಕರೂ ಆಗಿ ಜೀವನೋತ್ಸಾಹದಿ, ಬಿಳಿ ಬಿಳಿ ಬಟ್ಟೆಗಳಲ್ಲಿ ಬೆಳಗುವ, ಕಲ್ಯಾಣ ಮಿತ್ರರಾಗಿ ಜನರ ಬಾಳ ಬೆಳಗಿಸುವ ವೈದ್ಯ ಬಳಗಕ್ಕೆಲ್ಲಾ ಹೃತ್ಪೂರ್ವಕ ಪ್ರೀತಿಯ ನಮನಗಳು.

ನಮ್ಮೆಲ್ಲರ ಜೀವನ ಸುಗಮವಾಗಿ, ಸಂತೋಷವಾಗಿರಬೇಕಾದರೆ ಶಿಕ್ಷಕ, ವೈದ್ಯ ಮತ್ತು ರೈತರ ಪಾತ್ರ ಅಪಾರವಾದದ್ದು. ಒಂದು ಜೀವ ಭೂಮಿಗೆ ಆನಂದದಿ ಆಗಮಿಸಿ, ನೂರ್ಕಾಲ ಆರೋಗ್ಯ, ಆನಂದ, ಶಾಂತಿಯ ಬಾಳು ಬಾಳಿ ನಿರ್ಗಮಿಸುವವರೆಗಿನ ತಮ್ಮಂತಹ ವೈದ್ಯರ ಕೊಡುಗೆಗೆ, ಶ್ರಮಕ್ಕೆ ಕೋಟಿ ಕೋಟಿ ಕೃತಜ್ಞತೆಗಳು. ಮನುಕುಲದ ಅತ್ಯುನ್ನತ ಕೆಲಸಗಳಲ್ಲೊಂದಾದ ವೈದ್ಯ ವೃತ್ತಿ ನಿರ್ವಹಿಸುತ್ತಾ ತಮ್ಮ ವೃತ್ತಿ ಬದುಕಿನಲ್ಲಿ ಸಾಕಷ್ಟು ರೋಗಿಗಳ ದೈಹಿಕ ಮತ್ತು ಮಾನಸಿಕ ವೇದನೆಗಳನ್ನು ನಿವಾರಿಸಿ, ಸುಂದರ ಬದುಕು ನಡೆಸಲು ಸಹಕರಿಸಿ, ಉಪಕರಿಸಿದ ವೈದ್ಯರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಭಾರತದ ಪ್ರಸಿದ್ಧ ವೈದ್ಯ ಮತ್ತು ಪಶ್ಚಿಮ ಬಂಗಾಳದ ಎರಡನೇ ಮುಖ್ಯಮಂತ್ರಿ ಬಿಧನ್ ಚಂದ್ರ ರಾಯ್ ಅವರ ಗೌರವಾರ್ಥ ವೈದ್ಯರ ದಿನವನ್ನು ಪ್ರತಿವರ್ಷ ಜುಲೈ 1 ರಂದು ಆಚರಿಸಲಾಗುತ್ತದೆ. ಈ ಸುದಿನದಂದು ನಾವೆಲ್ಲರು ವೈದ್ಯ ವೃಂದ ಹಾಗೂ ಸಹಾಯಕರಿಗೆ ಕೃತಜ್ಞತೆ ಹೇಳಲೇ ಬೇಕು. 'ವೈದ್ಯರು ನಿಜವಾಗಿಯೂ ಕಣ್ಣಿಗೆ ಕಾಣುವ ದೇವರೆ'. ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸುಸ್ಥಿತಿಗೆ ತರುವಲ್ಲಿ ವೈದ್ಯರ ಪಾತ್ರ ಗಣನೀಯವಾದುದು. ವೈದ್ಯರ ನಿಷ್ಠೆ, ಶ್ರಮ ಹಾಗೂ ನಿಸ್ವಾರ್ಥಭಾವದ ಸೇವೆ ರೋಗಿಗೆ ಮರು ಜನ್ಮವನ್ನು ನೀಡುತ್ತದೆ. 'ಉತ್ತಮ ಆರೋಗ್ಯಕ್ಕಿಂತ ಉನ್ನತ ಆಸ್ತಿ ಮತ್ತೊಂದಿಲ್ಲ'ಎಂಬ ಅರಿವು ಮೂಡಿಸುವಲ್ಲಿ ವೈದ್ಯರ ಪಾತ್ರ ಅತ್ಯಮೂಲ್ಯ, ಕೊರೋನಾ ಮಹಾಮಾರಿಯನ್ನು ಎದುರಿಸುವಂತಹ ಕಷ್ಟದ ಸಮಯದಲ್ಲೂ ಮನೆ ಬಾಗಿಲಿಗೆ ಬಂದು ಕೋವಿಡ್-19 ಬಗ್ಗೆ ಜಾಗೃತಿ ಮೂಡಿಸಿದ ವೈದ್ಯರು, ನರ್ಸ್ ಗಳಿಗೆ ಹೃದಯಪೂರ್ವಕ ಕೃತಜ್ಞತೆಗಳು, ಧನ್ಯವಾದಗಳು.




'ವೈದ್ಯೋ ನಾರಾಯಣ ಹರಿ' ಎಂಬ ಉಕ್ತಿಯಂತೆ ದೇವರ ರೂಪದಲ್ಲಿ ಭೂಮಿಯ ಮೇಲೆ ಜನರ ಸೇವೆಗೆ ಸದಾ ತಮ್ಮ ಜೀವನವನ್ನು ಮುಡುಪಾಗಿಟ್ಟಿರುವ ವೈದ್ಯರ ದಿನವನ್ನು ಆಚರಿಸುವ ಸುಸಂದರ್ಭ ನಮಗೊದಗಿದೆ, ಅಲ್ಲದೆ ಸಮಾಜದ ಎಲ್ಲಾ ಜನರ ಪರವಾಗಿ ನಮ್ಮ ಕರ್ತವ್ಯವೂ ಹೌದು. ವೈದ್ಯರ ದಿನವು ವೈದ್ಯರು ರೋಗಿಗಳ ಕಾಳಜಿ ಮತ್ತು ಸಮಾಜದ ಬಗ್ಗೆ ಸಹಾನುಭೂತಿಯಿಂದ ದುಡಿಯುವ ಮತ್ತು ಅವರ ತ್ಯಾಗ, ದೀರ್ಘ ಗಂಟೆಗಳ ಕೆಲಸ, ಗುಣಪಡಿಸುವ ನಿರಂತರ ಅನ್ವೇಷಣೆಯಲ್ಲಿ ಅವರು ಎದುರಿಸಿದ ಸವಾಲುಗಳಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವ ದಿನವಾಗಿದೆ.

ಕಷ್ಟದಲ್ಲಿ ಕೈ ಹಿಡಿಯುವವರು ಎದುರು ನಿಂತಾಗ ಅವರಲ್ಲಿ ಜನರು ದೇವರನ್ನು ಕಾಣುತ್ತಾರೆ. ವೈದ್ಯರನ್ನು ರೋಗಿಗಳು ಅದೇ ರೀತಿ ನೋಡುತ್ತಾರೆ. ನಂಬಿ ಬಂದ ರೋಗಿಗಳನ್ನು ಆರೈಕೆ ಮಾಡುವ ವೈದ್ಯರು ವಿಶ್ವ ಭಾವೈಕ್ಯತೆಯ ಪ್ರತೀಕ. ಓರ್ವ ಆದರ್ಶ ವೈದ್ಯ ತನ್ನ ಕುಟುಂಬದ ನೋವು, ನಲಿವುಗಳನ್ನು ಬದಿಗಿರಿಸಿ ತನ್ನ ಮುಂದೆ ಮಲಗಿದ ರೋಗಿಯ ಪ್ರಾಣವನ್ನು ಉಳಿಸಿಕೊಳ್ಳಲು ಅದೆಷ್ಟೋ ಹರಸಾಹಸ ಪಡುತ್ತಾನೆ. ವೈದ್ಯರು ರೋಗಿಯ ಬಗ್ಗೆ ಒಂದಿಷ್ಟೂ ಅಸಹ್ಯಪಟ್ಟುಕೊಳ್ಳದೇ ಹೆತ್ತ ತಾಯಿಯಂತೆ ಆರೈಕೆ ಮಾಡುವ ಅವರು ಮಾನವೀಯತೆಯ ಪ್ರತಿರೂಪ. ಅದಕ್ಕಾಗಿ ಅವರನ್ನು ಜನಜೀವನದ ಸೂಪರ್ ಹೀರೋಗಳು ಎಂದು ಕರೆಯಲಾಗುತ್ತದೆ. ವೈದ್ಯರಾಗುವುದು ತುಂಬಾ ಸುಲಭದ ಕೆಲಸವಲ್ಲ. ಅದಕ್ಕಾಗಿ 14 ವರ್ಷ ಸತತ ವಿದ್ಯಾತುರಾಣರಾಗಿ ಸುಖ ಮತ್ತು ನಿದ್ರೆ ಇಲ್ಲದೆ ಕಷ್ಟಪಟ್ಟಿರುತ್ತಾರೆ. ವೈದ್ಯರು ಸರಿಸಮಾರು ಶೇ 64 ರಷ್ಟು ಅಧಿಕಾವಧಿ ಕೆಲಸ ಮಾಡುತ್ತಾರೆ ಎಂಬ ಅಂಶ ವರದಿಯಾಗಿದೆ. ಇದು ವೈದ್ಯರ ಅಸಾಧಾರಣ ಪ್ರಯತ್ನ. ಸಮಾಜಕ್ಕೆ ಅವರ ಕಾಯಕದ ಕೊಡುಗೆ.


ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ರೋಗಿಯ ಸೇವೆಗೆ ಅಣಿಯಾಗುವ ಇವರ ವೃತ್ತಿ ವೃತ್ತಿಯೇ ಅಲ್ಲ. ಅದು ಮಾನವೀಯ ಧರ್ಮ. ರಾತ್ರಿ, ಹಗಲು ಎನ್ನದೇ ತಮ್ಮ ಆರೋಗ್ಯದ ಕಡೆಗೆ ಒಂದಿಷ್ಟು ಗಮನ ನೀಡದೇ ತಮ್ಮ ಬಂಧು ಬಳಗದ ಪ್ರೀತಿಯ ಪರಿಸರವನ್ನು ಮರೆತು ಸೇವೆಗೈಯ್ಯುವ ಇವರ ಕ್ರಿಯಾಶೀಲತೆಯ ಕಾಯಕ ಅಭಿಮಾನ ಮೂಡಿಸುತ್ತದೆ. ತಮ್ಮ ಅದೆಷ್ಟೋ ಕಷ್ಟಗಳನ್ನೆಲ್ಲ ಮರೆತು ರೋಗಿಯೊಂದಿಗೆ ನಗು ಮುಖದಿಂದ ಮಾತನಾಡುತ್ತಾ, ಭರವಸೆಯ ಮಾತುಗಳಿಂದ ರೋಗಿಯಲ್ಲಿ ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತಾರೆ. ಪ್ರೀತಿ ತುಂಬಿದ ಮಾತುಗಳಿಂದ ರೋಗಿಗಳಲ್ಲಿ ಆಪ್ತ ಸಂಜೀವಿನಿಯಂತೆ, ಸ್ನೇಹಿತನಂತೆ ಕಂಡು ಬರುತ್ತಾರೆ. ಹೀಗಾಗಿ ಇಡೀ ಸಮಾಜ ವೈದ್ಯಲೋಕವನ್ನು ಗೌರವಿಸಿ, ನಮಿಸುತ್ತದೆ. ಅವರ ನಿಸ್ವಾರ್ಥ ಸೇವೆಗೆ ತಲೆದೂಗುತ್ತದೆ.

ದಾವಣಗೆರೆಯ ಹಲವಾರು ವೈದ್ಯರು ಕರುಣಾ ಟ್ರಸ್ಟಿನ ಅನೇಕ ಸಮಾಜಮುಖಿ ಕಾರ್ಯಗಳಲ್ಲಿಯೂ ಸಹ ತಮ್ಮನ್ನು ತೊಡಗಿಸಿಕೊಳ್ಳುವುದರ ಜೊತೆಗೆ ಧನ ಸಹಾಯವಿತ್ತು ಸಹಕರಿಸುತ್ತಿದ್ದಾರೆ. ಇನ್ನುಳಿದ ವೈದ್ಯರೂ ಸಹ ಕರುಣೆ, ಮೈತ್ರಿ, ಪ್ರೀತಿಯಿಂದ ಸಮಾಜದ ಕಾರ್ಯಗಳಿಗೆ ನೆರವಾಗಲು ಕರುಣಾ ಟ್ರಸ್ಟ್ ವಿನಂತಿಸುತ್ತದೆ. ಅಲ್ಲದೆ ತಮ್ಮ ಹತ್ತಿರ ಚಿಕಿತ್ಸೆಗಾಗಿ ಬರುವ ಬಡವರಿಗೆ, ನಿರ್ಗತಿಕರಿಗೆ ಔದಾರ್ಯದಿಂದ ರಿಯಾಯಿತಿ ದರದಲ್ಲಿ ಸಾಧ್ಯವಾದರೆ ಉಚಿತವಾಗಿ ಚಿಕಿತ್ಸೆ ನೀಡಬೇಕಾಗಿ ತಮ್ಮಲ್ಲಿ ಕಳಕಳಿಯ ವಿನಂತಿ.

ವೈದ್ಯರಿಗೆ 'ಪರಮಾನಂದ, ಪರಮ ಶಾಂತಿ, ಪರಮ ಆರೋಗ್ಯ, ಪರಮ ಸಾರ್ಥಕ್ಯವನ್ನು' ಕೊಟ್ಟು ಕಾಪಾಡಲಿ ಎಂದು ವೈದ್ಯ ದೇವರುಗಳಾದ ಅಶ್ವಿನಿ, ಹಿಪೋಕ್ರೆಟಸ್, ಬಿ.ಸಿ.ರಾಯ್ ರಲ್ಲಿ ಪ್ರಾರ್ಥಿಸುತ್ತೇವೆ.

**- ಶಿವನಕೆರೆ ಬಸವಲಿಂಗಪ್ಪ**, ದಾವಣಗೆರೆ.

# ಆರ್ಕಿಯಾದಲ್ಲಿ ಹೈಡ್ರೋಜನ್ ಆರ್ಥಿಕತೆಯ ಶೋಧ



ಸಿಡ್ನಿ, ಜೂ. 30 - ವಿಶ್ವದ ಮುಕ್ಕಾಲು ಭಾಗದಷ್ಟು ದ್ರವ್ಯ ಹೈಡ್ರೋಜನ್‌ನಿಂದ ರೂಪುಗೊಂಡಿದೆ. ಭೂಮಿ ಸಹ ಆರಂಭಿಕ ಘಟ್ಟದಲ್ಲಿ ಹೈಡ್ರೋಜನ್‌ನಿಂದ ಸಮೃದ್ಧವಾಗಿತ್ತು.

ನಕ್ಷತ್ರಗಳಲ್ಲಿರುವ ಹೈಡ್ರೋಜನ್ ಅಣು ಪ್ರಕ್ರಿಯೆಗೆ ಒಳಗಾಗಿ ಬಿಸಿ ಹಾಗೂ ಬೆಳಕು ಉತ್ಪತ್ತಿಯಾಗುತ್ತದೆ.

ಭೂಮಿಯ ಮೇಲೆ ಆರಂಭಿಕ ದಿನಗಳಲ್ಲಿದ್ದ ಜೀವ ಸ್ವರೂಪಗಳಾದ ಆರ್ಕಿಯಾಗಳು ಹೈಡ್ರೋಜನ್ ಅವಲಂಬಿಸಿದ್ದವು. ಇವುಗಳನ್ನು 1970ರಲ್ಲಷ್ಟೇ ಪತ್ತೆ ಮಾಡಲು ಸಾಧ್ಯವಾಗಿತ್ತು.

ಶತಕೋಟಿ ವರ್ಷಗಳ ಹಿಂದೆ ಭೂಮಿಯ ಸ್ವರೂಪ ವೇಗವಾಗಿ ಬದಲಾಗುತ್ತಿತ್ತು. ಇಂತಹ ಬದಲಾವಣೆಗಳಯ ನಡುವೆಯೂ ಆರ್ಕಿಯಾಗಳು ಬದುಕುಳಿದಿದ್ದವು. ಇದು ವಿಜ್ಞಾನಿಗಳ ಕುತೂಹಲ ಹಾಗೂ ಅಧ್ಯಯನಕ್ಕೂ ಕಾರಣವಾಗಿದೆ.

ಆರ್ಕಿಯಾಗಳು ವಿಶೇಷ ಕಿಣ್ವಗಳನ್ನು ಹೊಂದಿರುತ್ತಿದ್ದವು. ಇವುಗಳು ಹೈಡ್ರೋಜನ್ ಅನಿಲದಿಂದ ಶಕ್ತಿ ಪಡೆಯುತ್ತಿದ್ದವು ಎಂಬುದು ಪತ್ತೆಯಾಗಿದೆ ಎಂದು ಮೊನಾಶ್ ಯೂನಿವರ್ಸಿಟಿಯ ಪೋಕ್ ಮ್ಯಾನ್ ಲ್ಯೂಂಗ್ ಹಾಗೂ ಕ್ರಿಸ್ ಗ್ರೀನಿ ತಿಳಿಸಿದ್ದಾರೆ. ಅವರ ಅಧ್ಯಯನವು ಸೆಲ್ ಅಂಡ್ ನೇಚರ್ ಕಮ್ಯುನಿಕೇಷನ್ಸ್ ನಿಯತಕಾಲಿಕದಲ್ಲಿ ಪ್ರಕಟವಾಗಿದೆ.

**ಹೈಡ್ರೋಜನ್ ಆಧರಿತ ಜೀವನ :** ಬೇರೆ ಯಾವುದೇ ಜೀವಿಯೂ ಬದುಕಲಾಗದ ಸ್ಥಳದಲ್ಲಿ ಆರ್ಕಿಯಾಗಳು ನೆಲೆಸಿದ್ದವು. ಕೆಲವು ಕಬ್ಬಿಣವನ್ನೇ ಕರಗಿಸುವಷ್ಟು ಆಸಿಡ್ ಅಂಶ ಹೊಂದಿರುವ ಕುದಿಯುವ ಚಿಲುಮೆಗಳಲ್ಲೂ ಬದುಕಿದ್ದವು.

ಭೂಗರ್ಭದಲ್ಲಿನ ಪ್ರಕ್ರಿಯೆಗಳ ಕಾರಣದಿಂದಾಗಿ ಈ ಚಿಲುಮೆಗಳಲ್ಲಿ ಹೈಡ್ರೋಜನ್ ನಿರಂತರವಾಗಿ ಉತ್ಪಾದನೆಯಾಗುತ್ತಿತ್ತು. ಆರ್ಕಿಯಾಗಳು ಈ ಹೈಡ್ರೋಜನ್ ಹೀರಿ ತಮ್ಮ ದೇಹವನ್ನು ರಿಪೇರಿ ಮಾಡಿಕೊಳ್ಳುತ್ತಿದ್ದವು. ಇಂತಹ ಕಠಿಣ ಪರಿಸ್ಥಿತಿಗಳಲ್ಲೂ ಅವುಗಳು ಬೆಳೆಯುತ್ತಿದ್ದವು.

ಗಾಳಿಯಲ್ಲಿದ್ದ ಅತ್ಯಲ್ಪ ಪ್ರಮಾಣದ ಹೈಡ್ರೋಜನ್ ಬಳಸಿಕೊಂಡೇ ಕೆಲ ಆರ್ಕಿಯಾಗಳು ಹೆಚ್ಚುವರಿ ಆಹಾರ ಪಡೆಯುತ್ತಿದ್ದವು. ಇದರಿಂದಾಗಿ ಒಂದು ಹೈಡ್ರೋಜನ್ ಚಿಲುಮೆಯಿಂದ ಮತ್ತೊಂದು ಚಿಲುಮೆಗೆ ಹೋಗಲೂ ಸಾಧ್ಯವಾಗುತ್ತಿತ್ತು.

**ಕತ್ತಲಲ್ಲೂ ಜೀವನ :** ಕೆಲ ಆರ್ಕಿಯಾಗಳು ಭೂಮಿಯ ಕೆಳಗೂ ನೆಲೆ ಕಂಡುಕೊಂಡಿದ್ದವು. ಆಕ್ಸಿಜನ್ ಇಲ್ಲದ ಇಂತಹ ಜಾಗದಲ್ಲಿ ಯಾವುದೇ ಜೀವಿ ಇರಲು ಸಾಧ್ಯವಾಗುತ್ತಿರಲಿಲ್ಲ.

ಆದರೆ, ಆರ್ಕಿಯಾಗಳು ಭೂಮಿಯಲ್ಲಿನ ಸಾವಯವ ಅಂಶಗಳಿಂದ ಬದುಕಲು ಅಗತ್ಯವಾದ ಆಹಾರ ಪಡೆಯುತ್ತಿದ್ದವು. ಸಾವಯವ ಪದಾರ್ಥಗಳನ್ನು ಹುದುಗಿಸಿ ಹೈಡ್ರೋಜನ್ ಪಡೆಯುತ್ತಿದ್ದವು. ಇದರಿಂದ ಸಿಗುವ ಅತ್ಯಲ್ಪ ಆಹಾರವನ್ನೇ ಅವಲಂಬಿಸಿರುತ್ತಿದ್ದವು. ಕೆಲ ಆರ್ಕಿಯಾಗಳ ಕಣಗಳು ಅತಿ ಚಿಕ್ಕವಾಗಿರುತ್ತಿದ್ದವು. ಇದರಿಂದ ಅವುಗಳ ಆಹಾ ರದ ಅಗತ್ಯವೂ ಕಡಿಮೆ ಇರುತ್ತಿತ್ತು. ಇನ್ನೂ ಕೆಲವು ಪರಾವಲಂಬಿ ಜೀವಿಗಳಾಗಿಯೂ ಬದುಕುತ್ತಿದ್ದವು.

ಇನ್ನು ಕೆಲ ಆರ್ಕಿಯಾಗಳು ಪ್ರಾಣಿಗಳ ಕರುಳಿನಲ್ಲೇ ಮನೆ ಮಾಡಿಕೊಂಡಿವೆ. ಮಿಥನೋಜೀನ್ ಎಂದು ಕರೆಯಲಾಗುವ ಈ ಆರ್ಕಿಯಾಗಳು ಹೈಡ್ರೋಜನ್ ತಿನ್ನುತ್ತವೆ ಹಾಗೂ ಮಿಥೇನ್ ಅನಿಲ ಹೊರ ಹಾಕುತ್ತವೆ.

ರಾಸುಗಳ ಕರುಳುಗಳಲ್ಲಿ ಮಿಥನೋಜೀನ್‌ಗಳು ಹೇರಳವಾಗಿವೆ. ಇವುಗಳು ದೊಡ್ಡ ಪ್ರಮಾಣದಲ್ಲಿ ಮಿಥೇನ್ ಹೊರ ಹಾಕಲು ಕಾರಣವಾಗುತ್ತಿವೆ. ಜಾಗತಿಕ ತಾಪಮಾನ ಹೆಚ್ಚಳಕ್ಕೆ ಮಿಥೇನ್ ಸಹ ಪ್ರಮುಖ ಕಾರಣವಾಗಿದೆ. ವಿಜ್ಞಾನಿಗಳು ಮಿಥೇನ್ ಹೊರ ಸೂಸುವಿಕೆ ಕಡಿಮೆ ಮಾಡುವ ಬಗ್ಗೆ ಗಂಭೀರ ಅಧ್ಯಯನ ನಡೆಸುತ್ತಿದ್ದಾರೆ.

ಆಧುನಿಕ ಜಗತ್ತು ಪಳಿಯುಳಿಕೆ ಇಂಧನದಿಂದ ದೂರವಾಗುವ ಪ್ರಯತ್ನದಲ್ಲಿದೆ. ಹೀಗಾಗಿ ಆರ್ಕಿಯಾಗಳ ಬದುಕಿನಿಂದ ಸಾಕಷ್ಟು ಕಲಿಯಲು ಅವಕಾಶವಿದೆ. ಶತಕೋಟಿಗಟ್ಟಲೆ ವರ್ಷಗಳಿಂದ ಆರ್ಕಿಯಾಗಳು ನೆಲೆ ಕಂಡುಕೊಂಡಿವೆ.

ಭೂಮಿಯಲ್ಲಿನ ಸಾಕಷ್ಟು ಹೈಡ್ರೋಜನ್ ನೀರಿನ ಸ್ವರೂಪದಲ್ಲಿದೆ. ನೀರಿನಿಂದ ಹೈಡ್ರೋಜನ್ ಹೊರ ತೆಗೆಯುವುದು ಈಗ ದುಬಾರಿಯಾಗಿದೆ. ಜೈವಿಕ ಹೈಡ್ರೋಜನ್ ವೇಗವರ್ಧಕಗಳ ಮೂಲಕ ವೆಚ್ಚ ಕಡಿಮೆಯಾಗುವ ಸಾಧ್ಯತೆ ಇದೆ. ಆರ್ಕಿಯಾಗಳು ಹೆಚ್ಚು ದಕ್ಷತೆಯಿಂದ ಹೈಡ್ರೋಜನ್ ಉತ್ಪಾದಿಸುವ ಮೂಲಕ ಆರ್ಥಿಕತೆಗೆ ನೆರವಾಗುವ ಸಾಧ್ಯತೆ ಇದೆ.

# ಸಂಸ್ಕೃತಿಯೊಂದಿಗೆ ಜ್ಞಾನ ಸಂಪಾದಿಸಿಕೊಳ್ಳಬೇಕು

## ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಡಾ. ಶಂಭು ಬಳಿಗಾರ



ರಾಣೇಬೆನ್ನೂರು, ಜೂ. 30- ಸ್ಥಳಿಯ ರಾ.ತಾ.ಶಿ. ಸಂಸ್ಥೆಯ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಪದವಿ ಮಹಾ ವಿದ್ಯಾಲಯದ 2023-24ರ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮ ಇಂದು ಅದ್ದೂರಿಯಾಗಿ ಜರುಗಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಾನಪದ ವಿದ್ವಾಂಸ ಡಾ. ಶಂಭು ಬಳಿಗಾರ ಮಾತನಾಡುತ್ತಾ, ಆರೋಗ್ಯವೇ ಭಾಗ್ಯವೆಂದು ವಿದ್ಯಾರ್ಥಿಗಳು ಸ್ಪಷ್ಟವಾಗಿ ತಿಳಿದಿರಬೇಕು, ಅದಕ್ಕಾಗಿ ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಅಲ್ಲದೆ ಉತ್ತಮ ಸಂಸ್ಕೃತಿಯೊಂದಿಗೆ ವಿದ್ಯಾರ್ಥಿಗಳು ಜ್ಞಾನಾರ್ಜನೆ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ತಂದೆ-ತಾಯಿಗಳ ಆಶೋತ್ತರಗಳನ್ನು ಈಡೇರಿಸುವುದಕ್ಕಾಗಿ ಶ್ರಮಿಸಬೇಕು ಎಂದು ಕರೆ ನೀಡಿದರು.

ವಿಶ್ರಾಂತ ಪ್ರಾಧ್ಯಾಪಕ ಸದಾಶಿವ.ಚ ಹುಲ್ಲತ್ತಿ ಮಾತನಾಡಿ, ವಿದ್ಯಾರ್ಥಿಗಳು ಉಜ್ವಲ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದರು. ವಿದ್ಯಾರ್ಥಿಗಳು ಕಷ್ಟಪಟ್ಟು ಅಭ್ಯಾಸ ಮಾಡಿ ಒಳ್ಳೆಯ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಸಂಸ್ಥೆಯ ಅಧ್ಯಕ್ಷ ಸುಭಾಸ್ ವಿ. ಸಾವುಕಾರ ತಿಳಿಸಿದರು. ಪ್ರಾಚಾರ್ಯ ಪ್ರೊ. ಸಿ.ಎ.ಹರಿಹರ ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಚಂದನಾ ಕೆ.ಆರ್ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಲಕ್ಷ್ಮಿ ಸಂಗಡಿಗರು ನಾಡಗೀತೆ ಹಾಡಿದರು. ಪ್ರೊ.ಸಿ.ಎನ್. ಪೂಜಾರ ಸ್ವಾಗತಿಸಿದರು. ಡಾ. ರಾಮರೆಡ್ಡಿ ಎಸ್. ರಡ್ಡೇರ್ ಅತಿಥಿಗಳನ್ನು ಪರಿಚಯಿಸಿದರು. ವಿದ್ಯಾರ್ಥಿ ಒಕ್ಕೂಟದ ಕಾರ್ಯಾಧ್ಯಕ್ಷ ಪ್ರೊ. ಎಲ್. ಎಮ್. ಮಾವಿನತೋಪ ವಾರ್ಷಿಕ ವರದಿ ಓದಿದರು. ಡಾ.ಸರಸ್ವತಿ ಬಮ್ಮನಾಳ, ಪ್ರೊ.ಎನ್.ಜಿ.ರಮೇಶ ಮತ್ತು ಮುನಾವರ್‌ಅಲಿ ಖಾನ್ ಅವರು ಬಹುಮಾನ ವಿತರಣೆ ಕಾರ್ಯಕ್ರಮ ನಡೆಸಿಕೊಟ್ಟರು. ಕು. ಚೈತ್ರಾ ಇನಾಮತಿ ಕಾರ್ಯಕ್ರಮ ನಿರ್ವಹಿಸಿದರು.

ಐ.ಕ್ಯೂ.ಎ.ಸಿ ಸಂಯೋಜಕ ಡಾ. ಮಧುಕುಮಾರ, ವಿದ್ಯಾರ್ಥಿ ಒಕ್ಕೂಟದ ಕಾರ್ಯದರ್ಶಿಗಳಾದ ತರುಣ ಪೂಜಾರ ಮತ್ತು ಕುಮಾರಿ ವಿದ್ಯಾ ಗುರ್ಜರ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಕು.ಚೈತ್ರಾ ಇನಾಮತಿ ಕಾರ್ಯಕ್ರಮ ನಿರ್ವಹಿಸಿದರು.

# ನೀಟ್, ಅಗ್ನಿಪಥ್ ಬಗ್ಗೆ ಸಂಸತ್ತಿನಲ್ಲಿಂದು ಪ್ರಸ್ತಾಪ

ನವದೆಹಲಿ, ಜೂ. 30 - ಸೋಮವಾರ ಸಂಸತ್ ಅಧಿವೇಶನ ಪುನರಾರಂಭವಾಗಲಿದ್ದು ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ, ಅಗ್ನಿಪಥ್ ಯೋಜನೆ ಹಾಗೂ ಹಣದುಬ್ಬರಗಳ ಕುರಿತು ಚರ್ಚೆಗಳು ನಡೆಯುವ ನಿರೀಕ್ಷೆ ಇದೆ.

ಪ್ರಶ್ನೆಪತ್ರಿಕೆ ಸೋರಿಕೆಯ ಜೊತೆಗೆ ಪ್ರತಿಪಕ್ಷಗಳು ನಿರುದ್ಯೋಗದ ವಿಷಯ ಸಹ ಪ್ರಸ್ತಾಪಿಸುವ ಸಾಧ್ಯತೆ ಇದೆ. ಲೋಕಸಭೆಯಲ್ಲಿ ಬಿಜೆಪಿ ಸದಸ್ಯ ಹಾಗೂ ಮಾಜಿ ಸಚಿವ ಅನುರಾಗ್ ಠಾಕೂರ್ ಅವರು ರಾಷ್ಟ್ರಪತಿ ಭಾಷಣಕ್ಕೆ ಧನ್ಯವಾದ ಸಲ್ಲಿಸುವ ನಿಲುವಳಿ ಕುರಿತ ಚರ್ಚೆ ಆರಂಭಿಸಲಿದ್ದಾರೆ. ಬಿಜೆಪಿ ಹಿರಿಯ ನಾಯಕಿ ದಿವಂಗತ ಸುಷ್ಮಾ ಸ್ವರಾಜ್ ಅವರ ಪುತ್ರಿ ಹಾಗೂ ಮೊದಲ ಬಾರಿ ಲೋಕಸಭಾ ಸದಸ್ಯೆಯಾಗಿರುವ ಬಾನ್ಸುರಿ ಸ್ವರಾಜ್ ಅವರು ಚರ್ಚೆಗೆ ಅನುಮೋದಿಸಲಿದ್ದಾರೆ.

ಧನ್ಯವಾದ ಸಲ್ಲಿಸುವ ನಿಲುವಳಿ ಕುರಿತ ಚರ್ಚೆಗಾಗಿ 16 ಗಂಟೆಗಳನ್ನು ಕಾಯ್ದಿರಿಸಲಾಗಿದೆ. ಇದರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಧನ್ಯವಾದ ಸಲ್ಲಿಸುವುದೂ ಸೇರಿದೆ. ರಾಜ್ಯಸಭೆಯಲ್ಲಿ ಚರ್ಚೆಗಾಗಿ 21 ಗಂಟೆ ಸಮಯ ಮೀಸಲಿಡಲಾಗಿದೆ. ಪ್ರಧಾನಿ ಮೋದಿ ಅವರು ಬುಧವಾರ ರಾಜ್ಯಸಭೆಯಲ್ಲಿ ಉತ್ತರಿಸಲಿದ್ದಾರೆ. ನೀಟ್ ವಿಷಯಕ್ಕೆ ಸಂಬಂಧಿಸಿದಂತೆ ಸಂಸತ್ತಿನ ಉಭಯ ಸದನಗಳಲ್ಲಿ ಪ್ರತಿಪಕ್ಷಗಳು ತೀವ್ರ ಕೋಲಾಹಲ ನಡೆಸಿವೆ.

# ಕಡಿಮೆ ವೆಚ್ಚದ ಹೈಡ್ರೋಕಾರ್ಬನ್ ಉತ್ಪಾದನಾ ವಿಧಾನ ಶೋಧ

ನವದೆಹಲಿ, ಜೂ. 30 – ಬೆಂಗಳೂರಿನ ಐ.ಐಎಸ್.ಸಿ. (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್)ಯ ಅಜೈವಿಕ ಹಾಗೂ ಭೌತ ರಸಾಯನ (ಐ.ಪಿಸಿ.) ವಿಭಾಗದ ಸಂಶೋಧಕರು ಕಿಣ್ವಗಳನ್ನು ಬಳಸಿ ಕಡಿಮೆ ವೆಚ್ಚದ ಹೈಡ್ರೋಕಾರ್ಬನ್ ರೂಪಿಸುವ ವಿಧಾನ ಕಂಡು ಹಿಡಿದ್ದಾರೆ. ಇದು ಜೈವಿಕ ಇಂಧನಕ್ಕೆ ಉಪಯುಕ್ತವಾಗಲಿದೆ.

ಪರಿಸರಕ್ಕೆ ಹಾನಿ ತರುವ ಹಾಗೂ ಸೀಮಿತ ಪ್ರಮಾಣದಲ್ಲಿರುವ ಪಳೆಯುಳಿಕೆ ಇಂಧನಕ್ಕೆ ಪರ್ಯಾಯ ಹುಡುಕಲು ಆದ್ಯತೆ ನೀಡಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಜೈವಿಕ ಇಂಧನದ ಸಂಶೋಧನೆ ಮಹತ್ವ ಪಡೆದಿದೆ ಎಂದು ಐ.ಐ.ಎಸ್.ಸಿ. ತಿಳಿಸಿದೆ.

ಕಿಣ್ವಗಳ ಮೂಲಕ ದೊಡ್ಡ ಪ್ರಮಾಣದಲ್ಲಿ ಹೈಡ್ರೋಕಾರ್ಬನ್ ಉತ್ಪಾದಿಸಬಹುದು. ಇವುಗಳನ್ನು ಜೈವಿಕ ಇಂಧನದ ಜೊತೆಗೆ ಪಾಲಿಮರ್, ಸೋಪು ಹಾಗೂ ಲುಬ್ರಿಕೆಂಟ್‌ಗಳಲ್ಲೂ ಬಳಸಬಹುದು ಎಂದು ಐ.ಐ.ಎಸ್.ಸಿ. ತಿಳಿಸಿದೆ. ಐ.ಐ.ಎಸ್.ಸಿಯ. ಈ ಅಧ್ಯಯನ ಸೈನ್ಸ್ ಅಡ್ವಾನ್ಸಸ್ ನಿಯತಕಾಲಿಕದಲ್ಲಿ ಪ್ರಕಟವಾಗಿದೆ.

ಯುಎನ್‌ಡಿಬಿ ಹೆಸರಿನ ಕಿಣ್ವಗಳು ಕೆಲ ಬ್ಯಾಕ್ಟೀರಿಯಾಗಳಲ್ಲಿರುತ್ತವೆ. ಇವುಗಳು ಕೊಬ್ಬಿನಾಮ್ಲವನ್ನು 1-ಅಲ್ಕಲೈನ್‌ಗಳಿಗೆ ವೇಗವಾಗಿ ಪರಿವರ್ತಿಸುತ್ತವೆ. ಇವುಗಳಿಗೆ ಕ್ಯಾಟಲೋಸ್ ಎಂಬ ಕಿಣ್ವ ಬೆರೆಸಲಾಗುತ್ತದೆ. ಇದರಿಂದ ಕಿಣ್ವಗಳ ಚಟುವಟಿಕೆ ಇನ್ನಷ್ಟು ಹೆಚ್ಚಾಗುತ್ತದೆ ಎಂದು ಐ.ಪಿ.ಸಿ. ಸಂಶೋಧನೆಯ ನೇತೃತ್ವದ ವಹಿಸಿದ್ದ ತಬೀಶ್ ಇಕ್ಬಾಲ್ ತಿಳಿಸಿದ್ದಾರೆ.

# ಯುಪಿಎಸ್‌ಸಿ ಸಾಧಕಿಗೆ ಸನ್ಮಾನ ಗೌರವ



ದಾವಣಗೆರೆ, ಜೂ.30- ಶಾಮನೂರಿನ ಶರಣಯ್ಯ ಸ್ವಾಮಿ ಮತ್ತು ಶರಣಮ್ಮ ದಂಪತಿ ಪುತ್ರಿ ಸೌಭಾಗ್ಯ ಬೀಳಗಿಮಠ್ ಯುಪಿಎಸ್‌ಸಿ ಪರೀಕ್ಷೆಯಲ್ಲಿ 101ನೇ ಸ್ಥಾನ ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಬಾಲ್ಯದಿಂದಲೂ ಐಎಎಸ್ ಆಗಬೇಕೆಂಬ ಕನಸು ಕಂಡಿದ್ದ ಸಾಧಕಿ ಸೌಭಾಗ್ಯ ಅವರು, ದಾವಣಗೆರೆಯಲ್ಲಿ ಪಿಯುಸಿ ವರೆಗಿನ ಶಿಕ್ಷಣ ಮುಗಿಸಿ ನಂತರ ಧಾರವಾಡದಲ್ಲಿ ಬಿ.ಎಸ್ಸಿ ಅಗ್ರಿ ಪದವಿ ಪಡೆದು, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೊಡಗಿ ಈ ಸಾಧನೆ ಮಾಡಿದ್ದಾರೆ.

ನಗರದ ವಿನ್ನರ್ಸ್ ಅಕಾಡೆಮಿಯ ಸಂಸ್ಥಾಪಕ ಡಾ. ಶಿವರಾಜ್ ಕಬ್ಬೂರ ಅವರು ಸೌಭಾಗ್ಯ ಬೀಳಗಿಮಠ ಅವರ ಸಾಧನೆ ಮೆಚ್ಚಿ ಕುಟುಂಬ ವರ್ಗ ಹಾಗೂ ಸ್ಪರ್ಧಾತ್ಮಕ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಸಾಧಕರನ್ನು ಸನ್ಮಾನಿಸಿ, ಗೌರವಿಸಿದರು. ನಗರದ ಎಸ್‌ಎಸ್‌ಎಂಬಿ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಅನಿತಾ ಎಚ್. ದೊಡ್ಡಗೌಡರ್ ಸೌಭಾಗ್ಯ ಬೀಳಗಿಮಠ ಅವರಿಗೆ ಶುಭ ಹಾರೈಸಿದರು.

# ರಾಮಕೃಷ್ಣ ಶಾಲೆಯಲ್ಲಿ ನಾಡ ಪ್ರಭು ಕೆಂಪೇಗೌಡ ಜಯಂತಿ



ದಾವಣಗೆರೆ, ಜೂ.30- ಇಲ್ಲಿನ ಡಿಸಿಎಂ ಟೌನಶಿಪ್‌ನಲ್ಲಿನ ಶ್ರೀ ರಾಮಕೃಷ್ಣ ಇಂಟರ್ ನ್ಯಾಷನಲ್ ಶಾಲೆಯಲ್ಲಿ ನಾಡ ಪ್ರಭು ಕೆಂಪೇಗೌಡರ 515ನೇ ಜಯಂತಿ ಆಚರಿಸಲಾಯಿತು. ಶಾಲೆಯ ಯು.ಕೆ.ಜಿ ವಿದ್ಯಾರ್ಥಿನಿ ಎನ್.ಎಂ. ವಂಶಿಕಾ ನಾಡ ಪ್ರಭು ಕೆಂಪೇಗೌಡರ ವೇಷ ಧರಿಸಿ ಎಲ್ಲರ ಗಮನ ಸೆಳೆದರು. ಈ ವೇಳೆ ಮುಖ್ಯ ಶಿಕ್ಷಕ ಡಿ.ಸಿ. ಸುರೇಶ್, ಶಿಕ್ಷಕಿಯರಾದ ಶೋಭಾ ಹುಲ್ಲುಮನಿ, ಕಾವ್ಯ, ಆಶಾ, ಮಹಾಲಕ್ಷ್ಮಿ, ಸೌಮ್ಯ, ಕರಿಬಸಮ್ಮ, ಶ್ರೀದೇವಿ, ತನುಶ್ರೀ ಹಾಗೂ ಪಾಲಕರು, ಮಕ್ಕಳು ಇದ್ದರು.

# ಐ.ಐ.ಎಂ. ಇಂದೋರ್‌ನಲ್ಲಿ ಮಹಿಳಾ ದಾಖಲಾತಿ ಇಳಿಕೆ

ಇಂದೋರ್, ಜೂ. 30 – ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಇಂದೋರ್‌ನ ಸ್ನಾತಕೋತ್ತರ ಅಧ್ಯಯನಕ್ಕೆ ಸೇರ್ಪಡೆಯಾಗುವ ಮಹಿಳೆಯರ ಪ್ರಮಾಣ 2021-23ರಲ್ಲಿ ಶೇ.33.88 ಇದ್ದದ್ದು, 2024-26ರ ಸಾಲಿಗೆ ಶೇ.27.59ಕ್ಕೆ ಕುಸಿದಿದೆ. ಈಗಿನ ಸ್ನಾತಕೋತ್ತರ ಪದವಿ ಯೋಜನೆ (ಪಿ.ಜಿ.ಪಿ.) ಯಲ್ಲಿ 482 ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ 349 ಪುರುಷರು ಹಾಗೂ 133 ಮಹಿಳೆಯರಾಗಿದ್ದಾರೆ.

2021-23ರಲ್ಲಿ ಶೇ.33.88, 2022-24ರಲ್ಲಿ ಶೇ.32.68 ಹಾಗೂ 2023-25ರಲ್ಲಿ ಶೇ.31.40 ಮಹಿಳೆಯರಿದ್ದರು. ಸಾಮಾನ್ಯ ಪ್ರವೇಶ ಪರೀಕ್ಷೆ ಹಾಗೂ ಸಂದರ್ಶನದ ಆಧಾರದ ಮೇಲೆ ಪ್ರವೇಶ ನೀಡಲಾಗುತ್ತದೆ. ಲಿಂಗ ವೈವಿಧ್ಯತೆಗೆ ಉತ್ತೇಜನ ನೀಡುವುದು ನಮ್ಮ ಆದ್ಯತೆಯಾಗಿದೆ. ಮಹಿಳೆಯರ ಪ್ರವೇಶ ಕಡಿಮೆಯಾಗಿರುವುದಕ್ಕೆ ಕಾರಣ ಪತ್ತೆ ಮಾಡಲಾಗುವುದು ಎಂದು ಐಐಎಂ ಇಂದೋರ್ ನಿರ್ದೇಶಕ ಹಿಮಾಂಶು ರಾಯ್ ಹೇಳಿದ್ದಾರೆ.

ಕೆಲ ಮ್ಯಾನೇಜ್‌ಮೆಂಟ್ ಸಂಸ್ಥೆಗಳು ಸೂಪರ್ ನ್ಯೂಮರರಿ ಪದ್ಧತಿಯನ್ನು ಜಾರಿಗೆ ತಂದಿವೆ. ಆ ಮೂಲಕ ಸಾಮಾನ್ಯಕ್ಕಿಂತ ಹೆಚ್ಚಿನ ಸಂಖ್ಯೆಯ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುತ್ತಿವೆ ಎಂದೂ ಅವರು ಹೇಳಿದ್ದಾರೆ.


## ಸನ್‌ಶೈನ್ ಪುರಂತರ ಹಾಸ್ಪಿಟಲ್

SUNSHINE PURANTAR HOSPITAL

3rd Main, MCC 'A' Block, Davangere - 577 002.

**VACANCY**

| POST | QUALIFICATION | EXPERIENCE | SALARY |
|---|---|---|---|
| WARD NURSING | GNM / BSC | 3 YEARS | 12000-14000 |
| | GNM / BSC | 5 YEARS | 15000-18000 |
| | ANM | 3 YEARS | 9000-10000 |
| OT NURSING | DOT & AT | 3 YEARS | 15000-18000 |
| | | 5 YEARS | 20000-25000 |
| MANAGER | ANY DEGREE | 3 YEARS | 15000 |
| | | 5 YEARS | 21000 |
| AAYA / HOUSEKEEPING | - | - | 8000-10000 |

Salary Based on Eligibility & Experience
Apply with : Biodata, Recent Colour Photo,
Address Proof, Degree Certificate. ಉಚಿತ ವಸತಿ ಸೌಲಭ್ಯವಿರುತ್ತದೆ.

SUNSHINE PURANTARA HOSPITAL

CONTACT : 98442 12123, 88846 34545



## ಹುಟ್ಟುಹಬ್ಬದ ಶುಭಾಶಯಗಳು - ಅಭಿನಂದನೆಗಳು



ಪ್ರತಿಷ್ಠಿತ ಸಾಮಾಜಿಕ ಸೇವಾ ಸಂಸ್ಥೆಗಳಲ್ಲೊಂದಾದ ದಾವಣಗೆರೆ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹೆಸರಾಂತ ಕೈಗಾರಿಕೋದ್ಯಮಿಗಳು, ಪ್ರತಿಷ್ಠಿತ ದಾವಣಗೆರೆ ಕ್ಲಬ್ ಉಪಾಧ್ಯಕ್ಷರೂ, ಹಿರಿಯರೂ ಆಗಿರುವ

**ಶ್ರೀ ಎಸ್.ಜಿ. ಉಳವಯ್ಯ**

ಅವರಿಗೆ 65ನೇ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುವುದರ ಜೊತೆಗೆ, ಶ್ರೀಯುತರು ದಾವಣಗೆರೆ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ದಿನಾಂಕ : 01.07.2024ರ ಸೋಮವಾರ ಅಧಿಕಾರ ವಹಿಸಿಕೊಳ್ಳುತ್ತಿರುವ ಶುಭ ಸಂದರ್ಭದಲ್ಲಿ ಆತ್ಮೀಯ ಅಭಿನಂದನೆಗಳು.

- ಹಂಪಯ್ಯ ಸ್ವಾಮಿ ಹಿರೇಮಠ
- ಎ.ಬಿ. ಚಂದ್ರಶೇಖರ
- ಬಿ.ಎಂ.ಕೆ. ಚಂದ್ರಣ್ಣ
- ಜಿ.ಬಿ. ಉಮೇಶ
- ಜಿ.ಎಸ್. ವೀರಣ್ಣ
- ಜಿ.ವಿ. ಸಿದ್ದೇಶಿ (ವಿನಾಯಕ ರೈಸ್ ಮಿಲ್)
- ಪ್ರಕಾಶ (ರೈಸ್ ಕಾರ್ನರ್)
- ಜಗದೀಶ (ಬಿಪಿಎಂ)
- ಷಣ್ಮುಖ (ಕರೂರ ಚಿರಂಜೀವಿ ರೈಸ್‌ಮಿಲ್)
- ಕೋರಿ ಸತೀಶ (ಶ್ವೇತ ಎಂಟರ್‌ಪ್ರೈಸಸ್)
- ಜಿ.ಎಸ್. ಜಗದೀಶ (ನಂದಿ ಸೆರಾಮಿಕ್ಸ್)
- ಮಹೇಶ (ನಂದಿ ಕಮರ್ಷಿಯಲ್)
- ಮಾಳಗಿ ಕೊಟ್ರೇಶಿ
- ಕಣವಿ ನಟರಾಜ
- ಮಾಳಗಿ ಪರಪ್ಪ & ಸನ್ಸ್
- ಎಂ.ಡಿ. ದೊಡ್ಡಪ್ಪ
- ಸಿ.ಎಂ. ಹಿರೇಮಠ
- ಹೆಚ್.ಎಂ. ನಾಗರಾಜ
- ಎಸ್. ನಾಗರಾಜ
- ಎನ್.ಜಿ.ಎಸ್. ರಮೇಶ
- ಎ.ಎಂ. ಹಿರೇಕೊಟ್ರೇಶ (ವಕೀಲರು)
- ಎಸ್.ಜಿ. ಗದಿಗಯ್ಯ
- ಕೆ.ಆರ್. ಕೊಟ್ರೇಶಿ
- ಬಿಜಾಪುರ ಸಿದ್ದೇಶಿ
- ಬಿ.ಎಂ.ಎಂ. ಮಹಾಂತೇಶಿ
- ಕಂಚಿಕೆರೆ ಸಿದ್ದೇಶಿ
- ಕಂಚಿಕೆರೆ ಕೊಟ್ರೇಶಿ
- ಪರಶುರಾಮ (ಪಿಎಸ್‌ಹೆಚ್)
- ಯು.ಕೆ. ಮುರುಗೇಶ
- ಒಣರೊಟ್ಟಿ ಮಹಾಂತೇಶ
- ಮಹಾಂತೇಶ ಸ್ವಾಮಿ (ಬಾಲಾಜಿ ರೋಡ್‌ವೇಸ್)
- ರಾಜಸಾಬ್ ಹೆಚ್.
- ಚಂದ್ರಶೇಖರ
- ಕೃಷ್ಣಮೂರ್ತಿ

# ಡಾ|| ಬಿ.ಸಿ. ರಾಯ್ ಸ್ಮರಣೆ ; ಇಂದು 'ರಾಷ್ಟ್ರೀಯ ವೈದ್ಯರ ದಿನಾಚರಣೆ'

ಮನುಷ್ಯನಿಗೆ ಆರೋಗ್ಯವೇ ಭಾಗ್ಯ, ಸಂಪತ್ತು ಎಂಬುದು ಸರ್ವಕಾಲಿಕ ಮಾತು 'health is wealth'.

ಆರೋಗ್ಯವನ್ನು ರಕ್ಷಿಸುವುದು, ಅನಾರೋಗ್ಯಕ್ಕೆ ಔಷಧಿ ನೀಡಿ, ಗುಣ ಪಡಿಸುವುದು ವೈದ್ಯರ ಕರ್ತವ್ಯವಾಗಿದೆ. 'ವೈದ್ಯೋ ನಾರಾಯಣೋ ಹರಿಃ' (ವೈದ್ಯ ದೇವರಿಗೆ ಸಮಾನ) ಎಂಬುದು ಭಾರತೀಯರ ನಂಬಿಕೆ. ಅನಾರೋಗ್ಯಕ್ಕೆ ತುತ್ತಾದ ರೋಗಿಯನ್ನು ಚಿಕಿತ್ಸೆ ಮೂಲಕ ಗುಣಪಡಿಸುವುದು ವೈದ್ಯರ ಮಹಾನ್ ಕಾಯಕ. ಅವರಿಗೆ ಗೌರವ, ಕೃತಜ್ಞತೆ ಸಲ್ಲಿಸುವುದು ಪ್ರತಿಯೊಬ್ಬರ ಕರ್ತವ್ಯ. ವೈದ್ಯರ ಸೇವೆ ಶ್ಲಾಘನೀಯ.

ಭಾರತದಲ್ಲಿ ವೈದ್ಯರು ಮತ್ತು ವೈದ್ಯರ ಪ್ರಮುಖ ಕೊಡುಗೆಗಳನ್ನು ಅಂಗೀಕರಿಸುವ, ಅವರ ಮಾನವೀಯತೆಯ ನಿರಂತರ ಸೇವೆ, ಕಾಳಜಿಗಾಗಿ ದೇಶದಲ್ಲಿ ದಿ|| ಪಿ.ವಿ. ನರಸಿಂಹ ರಾಯರು ಪ್ರಧಾನಿಯಾಗಿದ್ದಾಗ ಇನ್ನಿತರೆ ವೃತ್ತಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ದಿನಾಚರಣೆ ಅನುಸರಿಸುವಂತೆ ವೈದ್ಯ ವೃತ್ತಿಗೂ ಗೌರವ ಕೊಡುವ ಸಲುವಾಗಿ ಡಾ|| ಬಿಧನ್ ಚಂದ್ರರಾಯ್ ಅವರ ಜನ್ಮ ಮತ್ತು ಮರಣ ದಿನದ ಸ್ಮರಣೆಗಾಗಿ ಭಾರತದಲ್ಲಿ 1991 ಜುಲೈ 1ರಿಂದ 'ರಾಷ್ಟ್ರೀಯ ವೈದ್ಯರ ದಿನಾಚರಣೆ'ಯನ್ನು 'ವೈದ್ಯರ' ದಿನವನ್ನಾಗಿ ಆಚರಿಸಲು ನಾಂದಿ ಹಾಡಿದರು.

ವೈದ್ಯಕೀಯ ಕ್ಷೇತ್ರದ ಏಳುಬೀಳುಗಳನ್ನು ಆತ್ಮಾವಲೋಕನ ಮಾಡಿಕೊಂಡು, ಸವಾಲುಗಳನ್ನು ಮೆಟ್ಟಿನಿಂತು ವೈದ್ಯ ವೃತ್ತಿಯ ಪಾವಿತ್ರ್ಯತೆಯನ್ನು ಕಾಪಾಡಲು ಸಂಕಲ್ಪ ಮಾಡುವ ದಿನವಿದು.

**ಡಾ|| ಬಿ.ಸಿ. ರಾಯ್ ಅವರ ಹಿನ್ನೆಲೆ :**

ಡಾ|| ಬಿಧನ್ ಚಂದ್ರರಾಯ್ ಮಾನವೀಯತೆ, ಸಾಮಾಜಿಕ ಕಳಕಳಿ, ಅದ್ವಿತೀಯ ವೈದ್ಯಕೀಯ ಜ್ಞಾನದ ಅರಿವು, ಶಿಕ್ಷಣ ತಜ್ಞ, ರಾಜಕಾರಣಿ, ಸ್ವಾತಂತ್ರ್ಯ ಹೋರಾಟಗಾರ, 'ಭಾರತ ರತ್ನ' ಪ್ರಶಸ್ತಿ ಪುರಸ್ಕೃತ ಹೀಗೆ ಬಹುಮುಖ ಪ್ರತಿಭೆಯುಳ್ಳ ಅಂತರರಾಷ್ಟ್ರೀಯ ಖ್ಯಾತಿಯ ಶ್ರೇಷ್ಠ ವೈದ್ಯರು.

ದೇಶ ಪ್ರೇಮದ ಹಿನ್ನೆಲೆಯುಳ್ಳ ಸಾಮಾನ್ಯ ಕುಟುಂಬವೊಂದರಲ್ಲಿ 1882 ಜುಲೈ 1 ರಂದು ಪಾಟ್ನಾದಲ್ಲಿ ಜನಿಸಿದರು. 1962 ಜುಲೈ 1 ರಂದು ತಮ್ಮ 80ನೇ ವಯಸ್ಸಿನಲ್ಲಿ ಮರಣ ಹೊಂದಿದರು. ಹುಟ್ಟು ಮತ್ತು ಸಾವು ಒಂದೇ ದಿನಾಂಕವಾಗಿದ್ದ ವಿಶೇಷ ವ್ಯಕ್ತಿಯಾದ ವೈದ್ಯಲೋಕದ ಆದರ್ಶನೀಯ ಪ್ರಾತಃಸ್ಮರಣೀಯರು. ಸ್ವ-ಪ್ರತಿಭೆಯಿಂದ ಅವಕಾಶಗಳನ್ನು ಅನ್ವೇಷಿಸಿಕೊಂಡು, ಅವುಗಳನ್ನು ಗಿಟ್ಟಿಸಿಕೊಂಡು ತಾವು ಅಲಂಕರಿಸಿದ ಪ್ರತಿಯೊಂದು ಹುದ್ದೆಗೂ ಹೊಸಛಾಪನ್ನು ಮುದ್ರಿಸಿ, ಆ ಹುದ್ದೆಗಳಿಗೆ ಮತ್ತಷ್ಟು ಗೌರವ ತಂದರು. ಅವರು ಹುಟ್ಟಿದ ಮತ್ತು ಸಾವನ್ನಪ್ಪಿದ ಜುಲೈ 1 ರಂದು ರಾಷ್ಟ್ರೀಯ ವೈದ್ಯರ ದಿನಾಚರಣೆ ದಿನವನ್ನಾಗಿ 1991 ರಿಂದ ಭಾರತದಲ್ಲಿ ಆಚರಿಸಲಾಗುತ್ತದೆ. ಇಂದಿನ ವೈದ್ಯ ಪೀಳಿಗೆಗೆ ಡಾ|| ಬಿ.ಸಿ. ರಾಯ್ ಅವರ ಆದರ್ಶನೀಯ ವ್ಯಕ್ತಿತ್ವವನ್ನು ಪರಿಚಯಿಸುವುದಲ್ಲದೇ, ವೈದ್ಯಕೀಯ ಕ್ಷೇತ್ರದ ಬೆಳವಣಿಗೆಯ ಮೈಲುಗಲ್ಲುಗಳು ಮತ್ತು ಸವಾಲುಗಳ ಬಗ್ಗೆ ಬೆಳಕು ಚೆಲ್ಲಲು ಸಹಕಾರಿಯಾಗಿದೆ.

**ಪ್ರಾಧ್ಯಾಪಕರಾಗಿ, ಕುಲಪತಿಗಳಾಗಿದ್ದ ಡಾ|| ಬಿ.ಸಿ. ರಾಯ್ :**

ಡಾ|| ರಾಯ್ ಪಾಟ್ನಾದಲ್ಲಿ ಜನಿಸಿದರೂ ಪಶ್ಚಿಮ ಬಂಗಾಳವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡು ದೂರದ ಊರಿನಲ್ಲೂ ಪ್ರೀತಿ, ವಿಶ್ವಾಸ, ನಂಬಿಕೆ, ಹಾಗೂ ಜನಮೆಚ್ಚುಗೆ ಗಳಿಸಿದರು. ಕಲ್ಕತ್ತಾದಲ್ಲಿ 1905ರಲ್ಲಿ ವೈದ್ಯಕೀಯ ಪದವಿ ಪಡೆದು ನಂತರ ವೈದ್ಯಶಾಸ್ತ್ರದ ಅತ್ಯುನ್ನತ ಪದವಿಯಾದ ಎಂ.ಆರ್.ಸಿ.ಪಿ. ಮತ್ತು ಶಸ್ತ್ರಕ್ರಿಯಾ ಶಾಸ್ತ್ರದ ಅತ್ಯುನ್ನತ ಪದವಿಯಾದ ಎಫ್.ಆರ್.ಸಿ.ಪಿ. ಗಳೆರಡೂ ಪದವಿಗಳನ್ನು ಎರಡೇ ವರ್ಷಗಳಲ್ಲಿ ಏಕಕಾಲಕ್ಕೆ ಇಂಗ್ಲೆಡಿನ ಪ್ರತಿಷ್ಠಿತ ರಾಯಲ್ ಕಾಲೇಜಿನಲ್ಲಿ ಪಡೆದ ಅಪ್ರತಿಮ ಪ್ರತಿಭಾವಂತರು. 1911ರಲ್ಲಿ ಭಾರತಕ್ಕೆ ಹಿಂದುರುಗಿ ಕಲ್ಕತ್ತಾ ಮೆಡಿಕಲ್ ಕಾಲೇಜಿನಲ್ಲಿ ಬೋಧಕರಾಗಿ ಕೆಲಸಕ್ಕೆ ಸೇರಿದರು. ನಂತರ ಕ್ಯಾಂಪ್‌ಬೆಲ್ ಮೆಡಿಕಲ್ ಸ್ಕೂಲ್, ಕಾರ್ ಮೆಡಿಕಲ್ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ವಿಶ್ವವಿದ್ಯಾನಿಲಯಗಳ ಕುಲಪತಿಗಳಾಗಿ ಸಾವಿರಾರು ವೈದ್ಯರ ಪರಂಪರೆಯ ಸೃಷ್ಟಿಗೆ ನಾಂದಿಯಾದವರು.

**ವೈದ್ಯಕೀಯ ಕ್ಷೇತ್ರಕ್ಕೆ ಡಾ|| ಬಿ.ಸಿ. ರಾಯ್ ಕೊಡುಗೆ:**

ವೈದ್ಯಕೀಯ ಕ್ಷೇತ್ರದ ಸಮಸ್ಯೆಗಳ ಪರಿಹಾರಕ್ಕಾಗಿ 1928ರಲ್ಲಿ ಭಾರತೀಯ ವೈದ್ಯಕೀಯ ಸಂಘ (IMA). ವೈದ್ಯಕೀಯ ಶಿಕ್ಷಣದ ಗುಣಮಟ್ಟ ಮತ್ತು ಸೇವೆ ಹೆಚ್ಚಿಸಲು 1934 ರಲ್ಲಿ ಭಾರತೀಯ ವೈದ್ಯಕೀಯ ಪರಿಷತ್ತು (IMC) ರಾಷ್ಟ್ರೀಯ ವೈದ್ಯಕೀಯ ಪರಿಷತ್ತು (NMC) ಸ್ಥಾಪಿಸಿದರು.

ಇಂತಹ ಮಹತ್ವದ ಸಂಸ್ಥೆಗಳನ್ನು ಹುಟ್ಟುಹಾಕಿ, ಆ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರಾಗಿ ವೈದ್ಯಕೀಯ ಕ್ಷೇತ್ರದ ಬೆಳವಣಿಗೆಗೆ ಭದ್ರವಾದ ಬುನಾದಿ ಹಾಕಿದ ವೈದ್ಯ ಸಂಘಟನೆಗಳ ಪಿತಾಮಹರು. ಜಾಧವ್‌ಪುರ್ ಟಿ.ಬಿ. ಆಸ್ಪತ್ರೆ, ಚಿತ್ರರಂಜನ್ ಸೇವಾಸದನ, ಕಮಲಾ ನೆಹರು ಮೆಮೋರಿಯಲ್ ಆಸ್ಪತ್ರೆ, ವಿಕ್ಟೋರಿಯಾ ಇನ್‌ಸ್ಟಿಟ್ಯೂಷನ್, ಚಿತ್ತರಂಜನ್ ಕ್ಯಾನ್ಸರ್ ಆಸ್ಪತ್ರೆಗಳ ಸ್ಥಾಪನೆಯಲ್ಲಿ ಡಾ|| ಬಿ.ಸಿ. ರಾಯ್ ಪಾತ್ರ ಪ್ರಮುಖವಾಗಿದೆ. 1946ರಲ್ಲಿ ಭಾರತೀಯ ವೈದ್ಯಕೀಯ ಸಂಘ, ವಿಶ್ವ ವೈದ್ಯಕೀಯ ಸಂಘದ ಸಂಘಟನೆಯಲ್ಲಿ (ಡಬ್ಲ್ಯೂ.ಎಂ.ಎ) ಸಹಾಯ ಮಾಡಿತು. ಅದರ ಸ್ಥಾಪಕ ಸದಸ್ಯರು ಡಾ|| ಬಿ.ಸಿ. ರಾಯ್ ಅವರು. ಇದರ ಕೇಂದ್ರ ಕಛೇರಿ ಫ್ರಾನ್ಸ್‌ನಲ್ಲಿದೆ. ಐ.ಎಂ.ಎ. ಕಛೇರಿ ನವದೆಹಲಿಯಲ್ಲಿದೆ.

**ಡಾ|| ಬಿ.ಸಿ. ರಾಯ್ ಮುಖ್ಯಮಂತ್ರಿಯಾಗಿ ಸೇವೆ :**



ವೈದ್ಯರು, ಶಿಕ್ಷಣ ತಜ್ಞರು, ಪ್ರಾಧ್ಯಾಪಕರಾಗಿ ತಮ್ಮ ವೈದ್ಯಕೀಯ ಸೇವೆಯ ಜನಪ್ರಿಯತೆಯಿಂದಲೇ ಸಾಮಾಜಿಕ ರೋಗಗಳಿಗೂ ವೈದ್ಯರಾಗುವ ಅವಕಾಶವನ್ನು ಗಳಿಸಿಕೊಂಡು ಜನರ ಉನ್ನತಿಗೆ ಅವರಲ್ಲಿದ್ದ ಕಾಳಜಿ, ಮಾನವೀಯ ಗುಣಗಳು ಮತ್ತು ಸೇವೆಯಲ್ಲಿ ಅವರಿಗಿದ್ದ ಪ್ರೀತಿಯಿಂದ ಅವರು ರಾಜಕೀಯವಾಗಿ ಗುರುತಿಸಿಕೊಂಡರು. ಭಾರತೀಯ ಕಾಂಗ್ರೆಸ್ ಸದಸ್ಯರಾದರು. ಕೊಲ್ಕತ್ತಾ ನಗರಸಭೆಯ ಮೇಯರ್ ಆಗಿ ಕಾರ್ಯನಿರ್ವಹಿಸಿದರು. ತಮ್ಮ ಜನಪ್ರಿಯತೆಯಿಂದ ಪಶ್ಚಿಮ ಬಂಗಾಳದ ಎರಡನೇ ಮುಖ್ಯಮಂತ್ರಿಯಾಗಿ ಸುದೀರ್ಘವಾಗಿ 1948–1962ರ ವರೆಗೆ 14 ವರ್ಷಗಳ ಕಾಲ ಜನ ಸೇವೆ ಮಾಡುವ ಮೂಲಕ ಅನೇಕ ಅಭಿವೃದ್ಧಿ ಕಾರ್ಯಗಳನ್ನು, ಸುಧಾರಣೆಗಳನ್ನು ಜಾರಿಗೆ ತಂದರು. ವೈದ್ಯನೊಬ್ಬ ತನ್ನ ಸೇವೆಯ ಶ್ರದ್ಧೆಯಿಂದ, ಗಳಿಸುವ ಪ್ರೀತಿ-ಪಾತ್ರದಿಂದಲೇ ಯಾವ ಬಗೆಯ ಉನ್ನತ ಅಧಿಕಾರದ ಮನ್ನಣೆಯನ್ನು ಪಡೆಯಬಹುದು ಎಂಬುದಕ್ಕೆ ಡಾ|| ಬಿ.ಸಿ.ರಾಯ್ ಜ್ವಲಂತ ಸಾಕ್ಷಿಯಾಗಿದ್ದಾರೆ. ಅವರು ಮುಖ್ಯಮಂತ್ರಿಯಾಗಿದ್ದಾಗಲೂ ಪ್ರತಿ ನಿತ್ಯ ಒಂದು ಗಂಟೆ ಕೊಳಗೇರಿಗಳಲ್ಲಿ ರೋಗಿಗಳನ್ನು ಪರೀಕ್ಷಿಸಿ, ಉಚಿತವಾಗಿ ಚಿಕಿತ್ಸೆ ನೀಡುತ್ತಿದ್ದರು. ದೇಶದ ಸೇವೆಗಾಗಿ ಬ್ರಹ್ಮಚಾರಿಯಾಗಿಯೇ ಉಳಿದ ಅವರು, ತಮ್ಮ ಕೊನೆಯ ದಿನಗಳಲ್ಲಿ ತಾವು ಸಂಪಾದಿಸಿದ ಆಸ್ತಿ-ಪಾಸ್ತಿಗಳನ್ನು ಸಾರ್ವಜನಿಕ ಸಂಸ್ಥೆಗೆ ದಾನ ಮಾಡಿದ ಆದರ್ಶನೀಯರು.

**ಮಹಾತ್ಮ ಗಾಂಧೀಜಿಗೆ ವೈದ್ಯರಾಗಿದ್ದ ಡಾ|| ರಾಯ್ :**

ಮಹಾತ್ಮ ಗಾಂಧೀಜಿಯವರೊಂದಿಗೆ ಆತ್ಮೀಯರಾಗಿದ್ದ ಇವರು 1930ರಲ್ಲಿ ಅಸಹಕಾರ ಚಳವಳಿಯ ನೇತೃತ್ವ ವಹಿಸಿದ್ದರು. 1942ರಲ್ಲಿ ಕ್ವಿಟ್ ಇಂಡಿಯಾ (ಭಾರತ ಬಿಟ್ಟು ತೊಲಗಿ) ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಮಹಾತ್ಮ ಗಾಂಧೀಜಿಯವರಿಗೆ ವೈಯಕ್ತಿಕ ವೈದ್ಯರಾಗಿದ್ದ ಅಪ್ರತಿಮ ದೇಶಭಕ್ತರಿವರು. ಬ್ರಹ್ಮಸಮಾಜದ ಅನುಯಾಯಿಗಳಾಗಿದ್ದರು.

**'ಭಾರತ ರತ್ನ' ಪ್ರಶಸ್ತಿ ಪಡೆದ ಡಾ|| ರಾಯ್ :**

ಮಾನವೀಯ ಮೌಲ್ಯವುಳ್ಳ ಶ್ರೇಷ್ಠ ವೈದ್ಯರಾಗಿ, ಜ್ಞಾನದಾಹಿ, ಶಿಕ್ಷಣ ತಜ್ಞರಾಗಿ, ಸಂಘಟನಾ ಚತುರರಾಗಿ, ರಾಷ್ಟ್ರಪ್ರೇಮವುಳ್ಳ ರಾಜಕಾರಣಿಯಾಗಿ, ಸರಳ ಜೀವಿಯಾಗಿ, ಮುಖ್ಯಮಂತ್ರಿಯಾಗಿ, ವೈದ್ಯಕೀಯ ಕ್ಷೇತ್ರದಲ್ಲಿ ನೀಡಿದ ಕೊಡುಗೆಗಳನ್ನು ಪರಿಗಣಿಸಿ, ಭಾರತ ಸರ್ಕಾರ ಫೆಬ್ರವರಿ 4, 1961ರಲ್ಲಿ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ'ವನ್ನು ನೀಡಿ ಗೌರವಿಸಲಾಯಿತು. ಈ ಗೌರವಕ್ಕೆ ಪಾತ್ರರಾದ ಭಾರತದ ಮೊದಲನೇ ವೈದ್ಯರು ಇವರಾಗಿದ್ದಾರೆ. ಭಾರತೀಯ ವೈದ್ಯಕೀಯ ಸಂಘವು 1973 ರಿಂದ ಡಾ|| ಬಿ.ಸಿ.ರಾಯ್ ಹೆಸರಿನಲ್ಲಿ ಪ್ರತಿಭಾವಂತ ವೈದ್ಯರಿಗೆ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಮೊದಲನೇ ಪ್ರಶಸ್ತಿಯನ್ನು ಡಾ|| ಸಂದೀಪ್ ಮುಖರ್ಜಿ ಯವರಿಗೆ ನೀಡಲಾಯಿತು.

**ವೈದ್ಯಕೀಯ ಶಿಕ್ಷಣದಲ್ಲಿ ವಿಜ್ಞಾನದ ಸೌಲಭ್ಯಗಳು :**

ಡಾ|| ಬಿ.ಸಿ. ರಾಯ್ ಕಾಲದಲ್ಲಿ ವೈದ್ಯಕೀಯ ವಿಜ್ಞಾನ ಸೌಲಭ್ಯಗಳು ಇಂದಿನಷ್ಟು ಬೆಳೆಯದೇ ಇದ್ದರೂ ಮತ್ತು ಆಧುನಿಕ ರೋಗ ಪತ್ತೆಯ ತಂತ್ರಜ್ಞಾನದ (ಸಿ.ಟಿ., ಎಂ.ಆರ್.ಐ., ಪೆಟ್, ಕ್ಯಾಥ್ ಲ್ಯಾಬ್ ಇತ್ಯಾದಿ) ಸೌಲಭ್ಯಗಳು ಲಭ್ಯವಿಲ್ಲದಿದ್ದರೂ ರೋಗಿ ನೀಡುವ ಮಾಹಿತಿ ಮತ್ತು ದೈಹಿಕ ಪರೀಕ್ಷೆಗಳಾಧಾರಿತ ಕ್ಲಿನಿಕಲ್ ಜ್ಞಾನದಿಂದಲೇ ರೋಗ ಪತ್ತೆಯನ್ನು ಮಾಡಿ ಸಮರ್ಥವಾಗಿ ಚಿಕಿತ್ಸೆ ನೀಡುತ್ತಿದ್ದ ಕಾಲವದು. ಇಂದು ಕ್ಲಿನಿಕಲ್ ಜ್ಞಾನ ಕಡಿಮೆಯಾಗಿ, ಆಧುನಿಕ ತಂತ್ರಜ್ಞಾನದ ಸಲಕರಣೆಗಳಿಂದ ನಿರ್ದಿಷ್ಟವಾಗಿ ರೋಗ ಪತ್ತೆ ಮಾಡುವ ವಿಧಾನಗಳು ಮೇಲುಗೈ ಪಡೆದಿವೆ. ಉತ್ಕೃಷ್ಟ ಸೂಕ್ಷ್ಮ ಜೀವಿ ನಿರೋಧಕಗಳ, ರೋಬಾಟಿಕ್ ಶಸ್ತ್ರಕ್ರಿಯೆ, ಸೈಬರ್‌ನೈಫ್, ಲೆಪ್ರೋಸ್ಕೋಪಿ, ಒಳಾಂಗ ದರ್ಶನ ಶಸ್ತ್ರಕ್ರಿಯೆ, ಲೇಸರ್ ಚಿಕಿತ್ಸೆ, ಬ್ರೇಕಿಥೆರಪಿ, ರೇಡಿಯೇಷನ್ ಥೆರಪಿ ಇತ್ಯಾದಿ ಹೊಸ ಹೊಸ ಆತ್ಯಾಧುನಿಕ ಚಿಕಿತ್ಸಾ ವಿಧಾನಗಳ ಅನ್ವೇಷಣೆಯಿಂದ ರೋಗಗಳನ್ನು ನಿಯಂತ್ರಿಸಿ ಜೀವಾವಧಿಯನ್ನು ಮುಂದೂಡಲಾಗಿದೆ.

**ಬದಲಾದ ವೈದ್ಯರ ಮನೋವೃತ್ತಿ :**

ವೈದ್ಯಕೀಯ ಕ್ಷೇತ್ರವೂ ಸಮಾಜದ ಒಂದು ಅಂಗವಾಗಿದ್ದು, ಆಯಾಮ ಕಾಲಘಟ್ಟದಲ್ಲಿ ಆದ ಬದಲಾವಣೆಗಳು ವೈದ್ಯಕೀಯ ಕ್ಷೇತ್ರದ ಮೇಲೂ ಬೀರಿರುವ ಪರಿಣಾಮಗಳನ್ನು ಅಲ್ಲಗಳೆಯುವಂತಿಲ್ಲ. ಮಾನವೀಯತೆ ಮತ್ತು ಸೇವಾದೃಷ್ಟಿಗಳು ಮೇಲುಗೈ ಪಡೆದಿದ್ದ ಅಂದಿನ ವೈದ್ಯಕೀಯ ಕ್ಷೇತ್ರ ಇಂದು ವಾಣಿಜ್ಯಮಯವಾಗಿ, ವ್ಯವಹಾರಿಕವಾದ ಸೇವೆಯಾಗಿ ಪರಿವರ್ತನೆಗೊಂಡಿದೆ. 'ಯಮಹರತಿ ಪ್ರಾಣವೈದ್ಯ ಧನಾನಿಚ' ಯಮ ಪ್ರಾಣವನ್ನು ಮಾತ್ರ ಕಸಿದರೆ ವೈದ್ಯ ಪ್ರಾಣದ ಜೊತೆಗೆ ಹಣ ಕಸಿಯುತ್ತಾನೆ ಎಂಬ ಅಭಿಪ್ರಾಯ ಇಂದು ಮೇಲುಗೈ ಪಡೆಯುತ್ತಿದೆ. ಇದಕ್ಕೆ ಸಮಾಜದ ವ್ಯವಸ್ಥೆಯೇ ಹೊಣೆಯೇ ವಿನಃ ಯಾರೊಬ್ಬರನ್ನು ಬೊಟ್ಟುಮಾಡಿ ತೋರಿಸುವಂತಿಲ್ಲ. ಭೌತಿಕ ಸುಖಾಕರ್ಷಣೆಯ ಮನೋಸ್ಥಿತಿ, ದುಬಾರಿಯಾದ ಆಧುನಿಕ ವೈದ್ಯ ತಂತ್ರಜ್ಞಾನದ ಸಲಕರಣೆಗಳು ವ್ಯಾಪಾರೀಕರಣಗೊಂಡ ವೈದ್ಯಕೀಯ ಶಿಕ್ಷಣ, ವೈದ್ಯ-ರೋಗಿಯ ನಡುವಿನ ಆತ್ಮವಿಶ್ವಾಸದ ಕೊರತೆ, ವೈದ್ಯಕೀಯ ಜ್ಞಾನ, ಅಂಗಾಂಗಳ ವಿಶೇಷ ತಜ್ಞತೆಯ ಜ್ಞಾನವಾಗಿ ವಿಂಗಡಣೆಗೊಂಡು ಅಂಗಾಂಗಕ್ಕೊಬ್ಬ ವಿಶೇಷ ತಜ್ಞರು ಹುಟ್ಟಿಕೊಂಡಿದ್ದು, ಸಮಗ್ರ ದೃಷ್ಟಿಯಿಂದ ರೋಗಿಯನ್ನು ನೋಡದಿರುವುದು ಪ್ರಮುಖ ಕಾರಣಗಳು. ಈ ವಿಷಮ ಸ್ಥಿತಿಯ ಕುರಿತು ಆತ್ಮಾವಲೋಕನ ಅತ್ಯಗತ್ಯ.

**ವೈದ್ಯ - ರೋಗಿಯ ಸಂಬಂಧ :**

ರೋಗ ಬಾರದಂತೆ ಆರೋಗ್ಯ ವೃದ್ಧಿಸಿ, ರೋಗವನ್ನು ವಾಸಿ ಮಾಡುವಲ್ಲಿ ವೈದ್ಯ-ರೋಗಿಯ ನಡುವಿನ ವಿಶ್ವಾಸಾರ್ಹತೆ ಮಹತ್ವದ್ದು. ವೈದ್ಯ-ರೋಗಿಗೆ ತೋರುವ ಬದ್ಧತೆ, ಪ್ರೀತಿ, ಮಾನವೀಯ ಕಾಳಜಿಗಳು ಅವರಿಬ್ಬರ ನಡುವಿನ ವಿಶ್ವಾಸಾರ್ಹತೆಯನ್ನು ವೃದ್ಧಿಸುತ್ತದೆ. ಇವಿಲ್ಲದೆ ವೈದ್ಯ ಪರಿಣಾಮಕಾರಿಯಾದ ಚಿಕಿತ್ಸೆ ನೀಡಿದರೂ ಅಪೇಕ್ಷಿತ ಫಲ ಸಿಗದು. ಇಂದು ಈ ವಿಶ್ವಾಸಾರ್ಹತೆ ಸಡಿಲಗೊಳ್ಳಲು ನುರಿತ ವೈದ್ಯರುಗಳ ಕೊರತೆ, ವಾಣಿಜ್ಯಮಯವಾದ ವೈದ್ಯಕೀಯ ಶಿಕ್ಷಣ ಮತ್ತು ವೃತ್ತಿ, ಮೂಲಭೂತ ಶಿಕ್ಷಣ ಸೌಲಭ್ಯವಿಲ್ಲದ ವೈದ್ಯಕೀಯ ಕಾಲೇಜುಗಳು, ಖಾಸಗಿಯವರಿಂದ ಆರಂಭವಾಗಿ ಅದಕ್ಷ ವೈದ್ಯರು ಹೊರ ಬರುತ್ತಿರುವುದನ್ನು ತಳ್ಳಿ ಹಾಕುವಂತಿಲ್ಲ. ಹೀಗಾಗಿ ವೈದ್ಯಕೀಯ ವೃತ್ತಿಯ ಸೇವಾಗುಣ ಮತ್ತು ಲೋಪದೋಷಗಳನ್ನು ಕಾನೂನಿನಲ್ಲಿ ತಂದು ಪರಿಹಾರ ನೀಡುವ ಮತ್ತು ಶಿಕ್ಷಿಸುವ ಕಾನೂನುಗಳು ಸಬಲಗೊಂಡಿರುವುದನ್ನು ಗಮನಿಸಬಹುದು.

ಈ ಎಲ್ಲಾ ಸವಾಲುಗಳ ಹಿನ್ನೆಲೆಯಲ್ಲೂ ವೈದ್ಯರುಗಳು ಡಾ|| ಬಿ.ಸಿ. ರಾಯ್ ಅವರ ವ್ಯಕ್ತಿತ್ವ, ಸೇವಾಗುಣ, ಜನಪ್ರಿಯತೆ, ಅವರಿಗಿದ್ದ ಕಾಳಜಿ-ಕಳಕಳಿಗಳನ್ನು ಪಾಲಿಸುವ ಪ್ರತಿಜ್ಞೆ ಮಾಡಬೇಕಲ್ಲವೆ? ಅಂದಾಗ ಸುಸ್ಥಿರ ಆರೋಗ್ಯವಂತ ಸಮಾಜ ನಿರ್ಮಾಣವಾಗಬಲ್ಲದು.



- ಡಾ. ಗಂಗಾಧರಯ್ಯ ಹಿರೇಮಠ
ನಿವೃತ್ತ ಪ್ರಾಧ್ಯಾಪಕರು,
ದಾವಣಗೆರೆ.
ಮೊ: 9880093613

## ನಗರದಲ್ಲಿ ಇಂದು ರಾಜ್ಯಮಟ್ಟದ ತಾಂತ್ರಿಕ ಮೇಳ

ದಾವಣಗೆರೆ, ಜೂ.30- ಸುಕಲ್ಪ ಎನ್ನುವ ಎರಡು ದಿನಗಳ ರಾಜ್ಯ ಮಟ್ಟದ ತಾಂತ್ರಿಕ ಮೇಳವನ್ನು ನಗರದ ಜಿಎಂ ಯೂನಿವರ್ಸಿಟಿಯ ಇನ್ಫರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದಲ್ಲಿ ಆಯೋಜಿಸಲಾಗಿದೆ ಎಂದು ಐಎಸ್‌ಇ ಮುಖ್ಯಸ್ಥ ಹಾಗೂ ಸುಕಲ್ಪದ ಸಂಚಾಲಕ ಡಾ.ಟಿ.ಎಂ. ವೀರಗಂಗಾಧರ ಸ್ವಾಮಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ದಿನಾಂಕ 1 ಹಾಗೂ 2ರಂದು ಎರಡು ದಿನಗಳ ಕಾಲ ವಿವಿಧ ತಾಂತ್ರಿಕ ಸ್ಪರ್ಧೆಗಳು ನಡೆಯಲಿವೆ.

ಮೊದಲನೇ ದಿನ ಕೊಡ ಕ್ಯಾಶ್, ಹ್ಯಾಕಥಾನ್, ಈ ಸ್ಪೋರ್ಟ್ಸ್ ಸ್ಪರ್ಧೆ ನಡೆಯಲಿದೆ. ಎರಡನೇ ದಿನ ಟೆಕ್‌ಮೇಜ್, ಇಂಜಿನಿಯರ್ಸ್ ಆಯ್, ಐಡಿಯಾ ಟ್ಯಾಂಕ್ ಸೇರಿದಂತೆ ಮುಂತಾದ ಸ್ಪರ್ಧೆಗಳು ಜರುಗಲಿವೆ ಎಂದು ಮಾಹಿತಿ ನೀಡಿದರು.

ಸುಕಲ್ಪದ ಸಂಯೋಜಕರಾದ ಪ್ರೊ. ನಸ್ರೀನ್ ತಾಜ್ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಪ್ಲೇಸ್‌ಮೆಂಟ್ ವಿಭಾಗದ ನಿರ್ದೇಶಕ ತೇಜಸ್ವಿ ಕಟ್ಟಿಮನಿ, ಟಿ.ಆರ್, ಐಎಸ್‌ಸಿ ವಿಭಾಗದ ಪ್ರಾಧ್ಯಾಪಕ ಪ್ರೊ.ಇಮ್ರಾನ್ ಖಾನ್ ಇದ್ದರು.

## ಕುರುಹಿನಶೆಟ್ಟಿ ಸಮಾಜ ಮಹಿಳಾ ಮಂಡಳಿ ಉದ್ಘಾಟನೆ

**ಹರಿಹರ**

ಹರಿಹರ, ಜೂ. 30 - ನಗರದ ಹೊಳೆ ಮೆಟ್ಟಿಲು ರಸ್ತೆ ಯಲ್ಲಿರುವ ಕಾಶಿ ನೀಲಕಂಠೇಶ್ವರ ದೇವಸ್ಥಾನ ಸಮುದಾಯ ಭವನದಲ್ಲಿ ಕುರುಹಿನಶೆಟ್ಟಿ ಸಮಾಜ ಮಹಿಳಾ ಮಂಡಳಿ ಮತ್ತು ಹೊಲಿಗೆ ತರಬೇತಿ ಶಿಬಿರದ ಉದ್ಘಾಟನೆ ನೆರವೇರಿಸಲಾಯಿತು. ಸಮಾಜದ ಪ್ರೌಢ ಸಂಘದ ಗೌರವ ಸಲಹೆಗಾರ ಅಣ್ಣಪ್ಪ ಶಾವಿ ಅವರು ಮಹಿಳಾ ಮಂಡಳಿ ಉದ್ಘಾಟನೆ ಮಾಡಿದರು. ಸಮಾಜದ ಅಧ್ಯಕ್ಷ ಬಸವರಾಜ್ ಇಂಡಿ ಶುಭ ಕೋರಿದರು.

ಗುತ್ತೂರು ಹೊಲಿಗೆ ಕಲಿಕೆ ತರಬೇತಿ ಶಿಬಿರದ ಉದ್ಘಾಟನೆಯನ್ನು ಮುಖ್ಯಸ್ಥರಾದ ಜಯಲಕ್ಷ್ಮಿ ಶಶಿಕುಮಾರ್ ಮೆಹರ್‌ವಾಡೆ ಮತ್ತು ತರಬೇತುದಾರರಾದ ಉಮಾರಾಣಿ ಗಂಗಾಧರ್ ಅವರು ನೆರವೇರಿಸಿದರು.

ಆರಂಭಕ್ಕೆ ಪ್ರಮೋದಿನಿ ಪ್ರಾರ್ಥನೆ ಮಾಡಿದರು. ಅಮಿತಾ ಇಂಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ರೇಖಾ ಶಾವಿ ಸ್ವಾಗತಿಸಿದರು. ಸ್ನೇಹ ನಾಗರಾಜ್ ಪದಾಧಿಕಾರಿಗಳ ಪರಿಚಯ ಮಾಡಿಸಿಕೊಟ್ಟರು. ವಿದ್ಯಾ ಗಡದ್ ನಿರೂಪಣೆ ಮಾಡಿದರು. ಭಾರತಿ ಶಾವಿ ವಂದಿಸಿದರು.

ರಾಧಾ ಹನುಮಂತಪ್ಪ ಸ್ವ-ರಚಿತ ಕವನ ವಾಚನ ಮಾಡಿದರು. ಪ್ರಮುಖರಾದ ವಿಜಯ್ ಕುಮಾರ್, ಶಶಿಕಲಾ, ನಾಗರಾಜ್ ಬುಟ್ಟಾ, ಚಂದ್ರಶೇಖರ್ ಅಂಬ್ರದ್, ಗೋವಿಂದ್ ಗಡದ್, ಕೋಟೇಶ್ ಭಂಡಾರಿ, ರಾಘು ಇಂಡಿ, ಮಹಿಳಾ ಸಂಘದ ನೂತನ ಅಧ್ಯಕ್ಷರಾದ ಸರಸ್ವತಿ ಐರಣಿ, ಸುಜಾತ, ರೋಹಿಣಿ, ರಾಧಾ, ಪೂರ್ಣಿಮಾ, ಸುಮಾ, ಸಾವಿತ್ರಮ್ಮ, ಅನಸೂಯ, ಸರಸ್ವತಿ ಇಂಡಿ, ಮಂಜುಳಾ ಇನ್ನಿತರರು ಹಾಜರಿದ್ದರು.



## ಕಕ್ಕರಗೊಳ್ಳದಲ್ಲಿ ಇಂದು ಎನ್ನೆಸ್ಸೆಸ್ ಶಿಬಿರ

ದಾವಣಗೆರೆಯ ಚಾಣಕ್ಯ ಪ್ರಥಮ ದರ್ಜೆ ವಾಣಿಜ್ಯ ಮಹಾವಿದ್ಯಾಲಯ ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಂದ ಕಕ್ಕರಗೊಳ್ಳ ಗ್ರಾಮದ ಸಮುದಾಯ ಭವನದಲ್ಲಿ ಎನ್‌ಎಸ್‌ಎಸ್ ಶಿಬಿರದ ಕಾರ್ಯಕ್ರಮಗಳು ನಡೆಯಲಿದೆ.

ಬೆಳಗ್ಗೆ ಗ್ರಾಮದ ಮುಖಂಡ ಕೆ.ಜಿ. ಬಸನಗೌಡ್ರು ಧ್ವಜಾರೋಹಣ ನೆರವೇರಿಸುವರು. ನಂತರ ಡಾ.ವಿ. ಮಹಮ್ಮದ್ ಮುಜ್ತಾಬಾ ಅವರು 'ಕೃಷಿ ದೇಶದ ಬೆನ್ನೆಲಬು' ಎಂಬ ವಿಷಯ ಕುರಿತು ಉಪನ್ಯಾಸ ನೀಡುವರು. ಸಂಜೆ 5.30ಕ್ಕೆ ಅರಣ್ಯ ಸಂರಕ್ಷಣಾಧಿಕಾರಿ ಎನ್.ಎಸ್. ರಾಘವೇಂದ್ರ ಅವರು 'ಅರಣ್ಯ ಮತ್ತು ಸಂರಕ್ಷಣೆ ಜಾಗೃತಿ'ಕುರಿತು ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಗ್ರಾಮದ ಮುಖಂಡ ಆರ್.ಡಿ. ಕುಲಕರ್ಣಿ ಮತ್ತು ಗಣ್ಯರು ಭಾಗವಹಿಸುವರು.

## ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ವಿಶ್ವಾಸ್ ಲೈಫ್ ಕೇರ್ ವತಿಯಿಂದ ವೈದ್ಯರ ದಿನಾಚರಣೆ ಅಂಗವಾಗಿ ಇಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 7580075866.

## ಹೊನ್ನಾಳಿ : 2 ಕ್ವಿಂಟಾಲ್ ಅಡಿಕೆ ಕಳವು

ಹೊನ್ನಾಳಿ, ಜೂ.30- ತಾಲ್ಲೂಕಿನ ಲಿಂಗಾಪುರ ಗ್ರಾಮದ ಹನುಮಂತಪ್ಪ ಎನ್ನುವವರ ಕಣದಲ್ಲಿದ್ದ 2 ಕ್ವಿಂಟಾಲ್ ಅಡಿಕೆ ಕಳವು ನಡೆದಿರುವ ಘಟನೆಯ ಕುರಿತು ಹೊನ್ನಾಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದೂರು ದಾಖಲಾಗಿದೆ.

## ಕನ್ನಡಿಗರಿಗೆ ಉದ್ಯೋಗ ಮೀಸಲಾತಿಗೆ ಆಗ್ರಹಿಸಿ ಇಂದು ನಗರದಲ್ಲಿ ಸತ್ಯಾಗ್ರಹ

ದಾವಣಗೆರೆ, ಜೂ. 30- ಸರೋಜಿನಿ ಮಹಿಷಿ ವರದಿ ಜಾರಿಗೆ ತರಬೇಕು. ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡಬೇಕೆಂದು ಒತ್ತಾಯಿಸಿ ಜುಲೈ 1ರ ಸೋಮವಾರ ಬೆಳಗ್ಗೆ 11.30ರಿಂದ ಸಂಜೆ 5ರವರೆಗೆ ಮಹಾನಗರ ಪಾಲಿಕೆ ಕಚೇರಿ ಬಳಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಗುವುದು ಎಂದು ವೇದಿಕೆ ಜಿಲ್ಲಾಧ್ಯಕ್ಷ ಎಂ.ಎಸ್.ರಾಮೇಗೌಡ ತಿಳಿಸಿದ್ದಾರೆ.

ಉಪವಾಸ ಸತ್ಯಾಗ್ರಹದಲ್ಲಿ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳು ಸದಸ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದ್ದಾರೆ. ಅಲ್ಲದೇ ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್. ಹೆಚ್. ಅರುಣ್ ಕುಮಾರ್, ಕಸಾಪ ಮಾಜಿ ಅಧ್ಯಕ್ಷ ಕುರ್ಕಿ ಮಂಜುನಾಥ, ವಾದ್ಯಗೋಷ್ಠಿ ಕಲಾವಿದರ ಸಂಘದ ಅಧ್ಯಕ್ಷ ಪರಮೇಶ್, ಪೀಪಲ್ ಲಾಯರ್ಸ್ ಗಿಲ್ಡ್ ಅಧ್ಯಕ್ಷ ಅನೀಸ್ ಪಾಷಾ ಮತ್ತಿತರರು ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ರಾಮೇಗೌಡ ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ತೋಟಗಾರಿಕೆ ಮಿಷನ್ ಯೋಜನೆಯಡಿ ವಿವಿಧ ಸೌಲಭ್ಯಗಳಿಗಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜೂ.30 - ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕಿನಲ್ಲಿ ಸಮುದಾಯ ಕೃಷಿ ಹೊಂಡ, ಕೃಷಿ ಹೊಂಡ, ಪ್ಯಾಕ್‌ಹೌಸ್, ಟ್ರ್ಯಾಕ್ಟರ್ 20 ಪಿಟಿಓ ಎಚ್‌ಪಿ ಒಳಗಿನ ಪ್ರಾಥಮಿಕ ಸಂಸ್ಕರಣಾ ಘಟಕ ಮತ್ತು ಎಸ್.ಎಂ.ಎ.ಎಂ. ಯೋಜನೆಯಡಿಯಲ್ಲಿ ಅಡಿಕೆ ಸಿಪ್ಪೆ ಸುಲಿಯುವ ಯಂತ್ರ, ಹಾಗೆ ಫೈಬರ್ ದೋಟಿ (ಅಡಿಕೆ ಕಟಾವು ಮಾಡಲು) ಪಡೆಯಲು ಪ್ರಸಕ್ತ ಆರ್ಥಿಕ ಸಾಲಿನಲ್ಲಿ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ರೈತರು ಜುಲೈ 6 ರೊಳಗೆ ಅರ್ಜಿಯೊಂದಿಗೆ ತಮ್ಮ ಜಮೀನಿನ ಪಹಣಿ, ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ಪುಸ್ತಕದ ಜೆರಾಕ್ಸ್ ಪ್ರತಿ, ಜಾತಿ ಪ್ರಮಾಣ ಪತ್ರದೊಂದಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯಿತಿ) ಹೊನ್ನಾಳಿ ಕಚೇರಿಯಲ್ಲಿ ಹಾಗೂ ಹೋಬಳಿವಾರು ರೈತ ಸಂಪರ್ಕ ಕೇಂದ್ರಗಳಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿಗಳಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

## ಸಾಲಕಟ್ಟೆಯಲ್ಲಿ ಇಂದು ಶಾಲಾ ಕೊಠಡಿ ಉದ್ಘಾಟನೆ

ಮಲೇಬೆನ್ನೂರು ಸಮೀಪದ ಸಾಲಕಟ್ಟೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಹೆಚ್ಚುವರಿ ಶಾಲಾ ಕೊಠಡಿಯನ್ನು ಇಂದು ಬೆಳಿಗ್ಗೆ 10.30ಕ್ಕೆ ಶಾಸಕ ಬಿ.ಪಿ.ಹರೀಶ್ ಉದ್ಘಾಟಿಸಲಿದ್ದು, ಎಸ್‌ಡಿಎಂಸಿ ಅಧ್ಯಕ್ಷ ಟಿ.ಎಂ.ಮಹೇಶ್ವರಯ್ಯ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳು : ಎಸ್.ಎಸ್.ಮಲ್ಲಿಕಾರ್ಜುನ್, ಡಾ. ಪ್ರಭಾ ಮಲ್ಲಿಕಾರ್ಜುನ್, ಜಿ.ಎಂ.ಸಿದ್ದೇಶ್ವರ, ಕೆ.ಎಸ್.ನವೀನ್, ಕೆ.ಅಬ್ದುಲ್ ಜಬ್ಬಾರ್, ಚಿದಾನಂದಗೌಡ ಮತ್ತಿತರರು.

## ಹರಿಹರ : ನಗರಸಭೆ ದಾಖಲೆಗಳ ಸುರಕ್ಷತೆಗೆ ಪ್ರತ್ಯೇಕ ವ್ಯವಸ್ಥೆ

ಹರಿಹರ, ಜೂ.30- ಇಲ್ಲಿನ ನಗರಸಭೆ ಕಟ್ಟಡ ಬಹಳ ಹಳೆಯದಾಗಿರುವ ಪರಿಣಾಮ ಸರ್ಕಾರ ನಗರಸಭೆಗೆ ಹೊಸದಾಗಿ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಮುಂದಾಗಿದ್ದರಿಂದ, ಹಳೇ ಕಟ್ಟಡದಲ್ಲಿ ದಾಖಲೆಗಳನ್ನು ಎಲ್ಲೆಂದರಲ್ಲಿ ಇಡುವಂತಾಗಿ, ಸಾರ್ವಜನಿಕರು ದಾಖಲೆಗಳನ್ನು ಪಡೆಯುವಾಗ ಸಾಕಷ್ಟು ತೊಂದರೆ ಅನುಭವಿಸಬೇಕಾಗಿತ್ತು. ಮಳೆ ಬಂದರೆ ಕಡತಗಳು ಮಳೆಯ ನೀರಿನಲ್ಲಿ ನೆನೆಯುವಂತಾಗಿತ್ತು. ಈ ವಿಚಾರಕ್ಕೆ ಸಂಬಂಧಿಸಿದಂತೆ ಪತ್ರಕರ್ತರು, ಅನೇಕ ನಗರಸಭೆ ಸದಸ್ಯರು ದಾಖಲೆಗಳನ್ನು ಸರಿಯಾದ ಕೊಠಡಿಯಲ್ಲಿ ಶೇಖರಣೆ ಮಾಡುವಂತೆ ಪೌರಾಯುಕ್ತ ಐಗೂರು ಬಸವರಾಜ್ ಅವರಿಗೆ ಮನವಿ ಮಾಡಿದ್ದರು.

ಎಲ್ಲೆಂದರಲ್ಲಿ ಇದ್ದಂತಹ ಕಡತಗಳನ್ನು ಶಿಸ್ತು ಬದ್ಧವಾಗಿ ಇಡುವುದಕ್ಕೆ ಸೌಭಾಗ್ಯಮ್ಮ, ಮಲ್ಲೇಶ್ ಎಂಬ ಇಬ್ಬರು ಸಿಬ್ಬಂದಿಗಳನ್ನು ನೇಮಕ ಮಾಡಿ, ಅದಕ್ಕೆ ಬೇಕಾದ ಹೊಸ ರ್‍ಯಾಕ್‌ಗಳನ್ನು ಖರೀದಿಸಿ, ನಗರಸಭೆ ಎಲ್ಲಾ ಇಲಾಖೆಗೆ ಸಂಬಂಧಿಸಿದ ಕಡತಗಳನ್ನು ಶೇಖರಿಸುವ ವ್ಯವಸ್ಥೆಯನ್ನು ಪೌರಾಯುಕ್ತರು ಮಾಡಿದ್ದಾರೆ.



## 7 ರಂದು ಯಕ್ಷಗಾನ ಪ್ರದರ್ಶನ

ದಾವಣಗೆರೆ, ಜೂ.30- ಸವಿಥೈನ್ ಮಹೇಶ್ ಶೆಟ್ಟಿ ಗೆಳೆಯರ ಬಳಗ ಮತ್ತು ಕರಾವಳಿ ಮಿತ್ರ ಮಂಡಳಿ ಇವರ ವತಿಯಿಂದ 'ಮಹಾಶಕ್ತಿ ವೀರಭದ್ರ' ಯಕ್ಷಗಾನ ಪ್ರದರ್ಶನವನ್ನು ಜುಲೈ 7 ರ ಭಾನುವಾರ ಸಂಜೆ 7ಕ್ಕೆ ನಗರದ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಬಯಲು ರಂಗ ಮಂದಿರದಲ್ಲಿ ಆಯೋಜಿಸಲಾಗಿದೆ.

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, 40x60 East, 40x60 North, 40x60 West, 50x80, 50x80 North ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಬನಂಶಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜಿ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ**
ಮಹಿಳಾ ಹಾಸ್ಟೆಲ್ ನಲ್ಲಿ ಅಡುಗೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. 9000 ಸಂಬಳ ಮತ್ತು ಊಟ, ವಸತಿ ಇರುತ್ತದೆ.
63609 76841

**ಸೈಟುಗಳು ಮಾರಾಟಕ್ಕಿವೆ**
ಅಮರಾವತಿಯ ಕರ್ನಾಟಕ ಗೃಹ ಮಂಡಳಿ ಮತ್ತು ಹೌಸಿಂಗ್ ಕಾಲೋನಿ ಪಕ್ಕದ ಹೆಚ್. ಆರ್.ಎಂ. ಬಡಾವಣೆಯಲ್ಲಿ ನೇರ ಮಾಲೀಕರಿಂದ ಸೈಟುಗಳು ಮಾರಾಟಕ್ಕಿವೆ.
98809 33630

**Property Hub**
• EC
• E-swathu
• Building Licence
• Khatha Change
96118 66449

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರೋಡ್ ಹತ್ತಿರ ಶನೇಶ್ವರ ದೇವಸ್ಥಾನ ಹಿಂಭಾಗದಲ್ಲಿ 30x60 North, 60x40 East, 30x40 East, 40x50 North-East Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x50 ಪೂರ್ವ ಅಕ್ಕ-ಪಕ್ಕ, 30x50 ಪಶ್ಚಿಮ ಅಕ್ಕ-ಪಕ್ಕ, 30x40 ಪಶ್ಚಿಮ ಅಕ್ಕ-ಪಕ್ಕ, ಹೊಸ ಬನಶಂಕರಿ ಬಡಾವಣೆಯಲ್ಲಿ 30x57 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ ಅಕ್ಕ-ಪಕ್ಕ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಪ್ರವೇಶ ಪ್ರಾರಂಭವಾಗಿದೆ**
Distance and Regular Mode, D-Pharma, B-Pharama, Paramedical, ANM, GNM, Phd, B.Ed.
Place :Davanagere. Contact : 93411 19195, 99800 32237

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಸ್ಪೋಕನ್ ಇಂಗ್ಲೀಷ್ & ಕಂಪ್ಯೂಟರ್ ಅಕಾಡೆಮಿ**
33 ದಿನಗಳಲ್ಲಿ ಕಲಿಯಿರಿ
ವಿಕಾಸ್ ಅಕಾಡೆಮಿ, ದಾವಣಗೆರೆ.
93802 29199
97399 22225

**ಕೋಳಿ ಫಾರಂ ಬಾಡಿಗೆಗಿದೆ**
ಹರಿಹರ ಬೈಪಾಸ್ ಬಳಿ ಇರುವ ದೇವರಬೆಳಕೆರೆ ಚಾನೆಲ್ ಹತ್ತಿರ ತೋಟದಲ್ಲಿ ಸುಮಾರು 5000 ಕೋಳಿಗಳನ್ನು ಸಾಕಾಣಿಕೆ ಮಾಡುವ ಕೋಳಿ ಫಾರಂ ಬಾಡಿಗೆಗೆ ಇದೆ.
98445 08048

**CONTACT FOR TUTIONS**
For All Subjects 8th,9th,10th (CBSE OR STATE)
63619 71813

**Need Computer Operater for Cyber Shop near Ram and Co, Circle**
90221 58935

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ Last Bus stop ದೇವಿ ಬನಶಂಕರಿ ಲೇಔಟ್‌ನಲ್ಲಿ 90x83 Corner, 30x40 East, 30x60 West, 30x55, 30x55 East ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಹೋಟೆಲ್ ಮಾರಾಟಕ್ಕಿದೆ**
ರೆಡಿ ಇರುವ ಬೆಣ್ಣೆ ದೋಸೆ ಹೋಟೆಲ್ ಮಾರಾಟಕ್ಕಿದೆ. ಮಳಿಗೆ ಬಾಡಿಗೆಗೆ ಇದೆ ಬಿಐಇಟಿ ರೋಡ್.
99642 62725

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮುಗಿಸಿದ ಹುಡುಗರು ಬೇಕಾಗಿದ್ದಾರೆ.
M/s ಬಸವಶ್ರೀ ಸೋಲಾರ್ ಟೆಕ್ನಾಲಜೀಸ್ ನಂ. 43 ಹೆಚ್, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ.3.7.2024ರ ಬುಧವಾರ ದಿ.4.7.2024ರ ಗುರುವಾರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**FOR RENT**
Godown or factory with wood Machinery for rent @ 7R2 karur KIADB, Davanagere
9242145611, 9845977475

**TUITIONS**
IGCSE, ICSE, CBSE and State Board from Class 5th to 12th MCC `A' Block
98444 92888

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
96322 95561

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಬೇಕಾಗಿದೆ**
ಬಿಐಇಟಿ ರಸ್ತೆ, ಬಾಯ್ಸ್ ಹಾಸ್ಟೆಲ್ ರಸ್ತೆ ಅಥವಾ ಮಾಮಾಸ್ ಜಾಯಿಂಟ್ ರಸ್ತೆಗಳಲ್ಲಿ 300 ರಿಂದ 500 ಅಡಿ ಮಳಿಗೆ ಅಥವಾ ಖಾಲಿ ಜಮೀನು ಫಾಸ್ಟ್ ಫುಡ್ ಸೆಂಟರ್‌ಗೆ (ಸಸ್ಯಹಾರಿ-ಮಾಂಸಹಾರಿಗಳಿಗೆ) ಬಾಡಿಗೆಗೆ ಬೇಕಾಗಿದೆ.
99168 15155, 96322 22626

**WANTED**
Multi Brand Car Service Required Following Candidate
1) Receptionist. Experience min. 2 Years. 2) Mechanic. Min. 2 Years Exp. 3) Washing Boy. min 2 Years Exp. Please Contact :
91485 71102

**SITE FOR SALE**
Size 40x60, Site No - 2445, Thungabhadra Badavane, KHB Layout.
Mob : 99648 53576

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಶಿವ-ಪಾರ್ವತಿಯಲ್ಲಿ 40x60 ಅಕ್ಕ-ಪಕ್ಕ ಪೂರ್ವ 30x55 ಅಕ್ಕ-ಪಕ್ಕ ಪೂರ್ವ, ಸರ್ಕಾರಿ ನೌಕರರ ಬಡಾವಣೆ 'ಬಿ' ಬ್ಲಾಕ್‌ನಲ್ಲಿ 30x50 ಉತ್ತರ ರೋಹನ್ ಗಾರ್ಡನ್‌ನಲ್ಲಿ 30x40 ಪೂರ್ವ ಮಿಟ್ಲಕಟ್ಟೆಯಲ್ಲಿ 20 ಗುಂಟೆ ಜಮೀನು CC ರಸ್ತೆ ಇದೆ. ಕೆ.ಬಿ. ಬಡಾವಣೆಯಲ್ಲಿ ಮನೆ 44x24 ಪೂರ್ವ ಮನೆ & ಸೈಟುಗಳು ಮಾರಾಟಕ್ಕಿವೆ.
84314 00907

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ 6.30ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

## ಟಿ20 ವಿಶ್ವಕಪ್ ಪಂದ್ಯಾವಳಿ : ಸೂರ್ಯಕುಮಾರ್‌ಗೆ ಕ್ಷೇತ್ರ ರಕ್ಷಣೆಗೆ ಪ್ರಶಸ್ತಿ



ಬ್ರಿಡ್ಜ್‌ಟೌನ್, ಜೂ. 30 - ಕ್ರಿಕೆಟಿಗ ಸೂರ್ಯಕುಮಾರ್ ಯಾದವ್ ಅವರು ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಅತ್ಯುತ್ತಮ ಕ್ಷೇತ್ರ ರಕ್ಷಕ ಪ್ರಶಸ್ತಿ ಪಡೆದಿದ್ದಾರೆ. ನಿರ್ಣಾಯಕ ಕ್ಷಣಗಳಲ್ಲಿ ದಕ್ಷಿಣ ಆಫ್ರಿಕಾದ ಅಪಾಯಕಾರಿ ಬ್ಯಾಟ್ಸ್‌ಮನ್ ಡೇವಿಡ್ ಮಿಲ್ಲರ್ ಅವರ ಕ್ಯಾಚ್ ಹಿಡಿಯುವ ಮೂಲಕ ಯಾದವ್ ಪಂದ್ಯದ ಗತಿ ಬದಲಿಸಿದ್ದರು.

ಭಾರತೀಯ ತಂಡದ ಫೀಲ್ಡಿಂಗ್ ಕೋಚ್ ಟಿ.ದಿಲೀಪ್ ಅವರು ಭಾರತೀಯ ತಂಡದ ಕ್ಷೇತ್ರ ರಕ್ಷಣೆಯನ್ನು ಪ್ರಶಂಸಿಸಿದ್ದು, ಆಟಗಾರರು ತೋಳಗಳ ತಂಡದ ರೀತಿಯಲ್ಲಿ ಕ್ಷೇತ್ರ ರಕ್ಷಣೆ ಮಾಡಿದ್ದರು ಎಂದು ಹೇಳಿದರು.

ತಂಡದ ಪ್ರಧಾನ ತರಬೇತುದಾರ ರಾಹುಲ್ ದ್ರಾವಿಡ್ ಹಾಗೂ ನಾಯಕ ರೋಹಿತ್ ಶರ್ಮ ಅವರು ನಿರಂತರವಾಗಿ ಕ್ಷೇತ್ರ ರಕ್ಷಣೆಯ ಪ್ರಾಮುಖ್ಯತೆ ಬಗ್ಗೆ ಹೇಳುತ್ತಿದ್ದರು. ಪ್ರತಿಯೊಂದು ಅವಕಾಶ ಬಾಚಿಕೊಳ್ಳಲು ಭಾರತದ ಕ್ಷೇತ್ರ ರಕ್ಷಕರು ಸನ್ನದ್ಧವಾಗಿರುತ್ತಿದ್ದರು ಎಂದು ದಿಲೀಪ್ ಹೇಳಿದ್ದಾರೆ.

ಕೊನೆಯ ಓವರ್‌ನಲ್ಲಿ ದಕ್ಷಿಣ ಆಫ್ರಿಕಾ ಗೆಲ್ಲಲು 16 ರನ್‌ಗಳ ಅಗತ್ಯವಿತ್ತು. ಆಗ ಸೂರ್ಯಕುಮಾರ್ ಅವರು ಸಮಾಧಾನ ಚಿತ್ತದಿಂದ ಅದ್ಭುತ ಕ್ಯಾಚ್ ಹಿಡಿದಿದ್ದು ಪಂದ್ಯ ಸಂಪೂರ್ಣವಾಗಿ ಭಾರತದ ಕಡೆ ವಾಲುವಂತೆ ಮಾಡಿತು.

## ಟಿ20 ಅಂತರರಾಷ್ಟ್ರೀಯ ಪಂದ್ಯಗಳಿಗೆ ಶರ್ಮ, ಕೊಹ್ಲಿ, ಜಡೇಜಾ ವಿದಾಯ

ನವದೆಹಲಿ, ಜೂ. 30 - ಅಂತರರಾಷ್ಟ್ರೀಯ ಟಿ20 ಪಂದ್ಯದಿಂದ ನಿವೃತ್ತರಾಗುವುದಾಗಿ ಆಲ್‌ರೌಂಡರ್ ರವೀಂದ್ರ ಜಡೇಜಾ ಘೋಷಿಸಿದ್ದಾರೆ.

ಇದಕ್ಕೂ ಮುಂಚೆ ಭಾರತೀಯ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮ ಹಾಗೂ ಹಿರಿಯ ಆಟಗಾರ ವಿರಾಟ್ ಕೊಹ್ಲಿ ಸಹ ಟಿ20 ಅಂತರರಾಷ್ಟ್ರೀಯ ಪಂದ್ಯಗಳಿಂದ ನಿವೃತ್ತಿ ಘೋಷಿಸಿದ್ದರು. ಏಕದಿನ ಹಾಗೂ ಟೆಸ್ಟ್‌ಗಳಲ್ಲಿ ಮುಂದುವರೆಯುವುದಾಗಿ ಅವರು ತಿಳಿಸಿದ್ದಾರೆ.

# ನಾಗಮ್ಮ ಕೇಶವಮೂರ್ತಿ ಕುರಿತ ಸಂಶೋಧನಾ ಗ್ರಂಥ ಹೊರ ತರಲಿ



ದಾವಣಗೆರೆ, ಜೂ. 30- ಮಾಜಿ ಸಚಿವೆ, ವನಿತಾ ಸಮಾಜದ ಸಂಸ್ಥಾಪಕರಾಗಿದ್ದ ದಿ. ಡಾ.ನಾಗಮ್ಮ ಕೇಶವಮೂರ್ತಿ ಅವರ ಜೀವನ ಸಾಧನೆ ಕುರಿತ ಸಂಶೋಧನಾ ಗ್ರಂಥ ಹೊರ ತರುವ ಅಗತ್ಯವಿದೆ ಎಂದು ನಗರದ ಸಾಧನಾಶ್ರಮದ ಮಾತಾಜಿ ಯೋಗಾನಂದಮಯಿ ಹೇಳಿದರು.

ನಗರದ ವನಿತಾ ಸಮಾಜದಲ್ಲಿನ ಶ್ರೀ ಸತ್ಯಸಾಯಿ ರಂಗಮಂದಿರದಲ್ಲಿ ವನಿತಾ ಸಮಾಜ ಹಾಗೂ ಈಶ್ವರಮ್ಮ ಟ್ರಸ್ಟ್ ಸಹಯೋಗದಲ್ಲಿ ಇಂದು ಹಮ್ಮಿಕೊಂಡಿದ್ದ 'ನಾಗಮ್ಮ ಆಂಟಿ- 90- ಒಂದು ನೆನಪು' ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ನಾಗಮ್ಮ ಅವರನ್ನು ಹತ್ತಿರದಿಂದ ನೋಡಿದವರು, ಅವರ ಜೀವನ ಸಾಧನೆಗಳನ್ನು ಸಂಪೂರ್ಣವಾಗಿ ಅರಿತಿರುವ ಅವರ ನಿಕಟವರ್ತಿ ಬಿ.ಎನ್. ಮಲ್ಲೇಶ್ ಅವರೇ ಪಿಹೆಚ್‌ಡಿ ಮಾಡಿದರೆ ಸೂಕ್ತ ಎಂದ ಅವರು, ನಾಗಮ್ಮ ಅವರ ಕುರಿತ ಸಂಶೋಧನಾ ಗ್ರಂಥ, ಸಂಸ್ಮರಣ ಗ್ರಂಥಗಳು ರಚನೆಯಾಗಿ ಮುಂದಿನ ಪೀಳಿಗೆಗೆ ಪ್ರೇರಣೆ ನೀಡುವಂತಾಗಲಿ ಎಂದರು.

ನಾಗಮ್ಮ ಅವರದು ಮೇರು ವ್ಯಕ್ತಿತ್ವ. ಕೀರ್ತಿ ಶರೀರ. ಸಾವಿರಾರು ಹಿರಿಯ ವನಿತೆಯರ ಪ್ರೀತಿಯ ಆಂಟಿ ಎನಿಸಿಕೊಂಡಿದ್ದರು. ಮಹಿಳೆಯರಿಗೆ ಪ್ರೇರಕ ಶಕ್ತಿಯಾಗಿದ್ದರು ಎಂದು ತಿಳಿಸಿದರು.

ಮಾನವ ಅಭಿವೃದ್ಧಿಯ ಎಲ್ಲಾ ಕ್ಷೇತ್ರಗಳಿಗೂ ಸ್ಪರ್ಶ ನೀಡಿ, ಅದರ ಸಾಧಕ ಬಾಧಕಗಳನ್ನು ಅರಿತುಕೊಂಡವರಾಗಿದ್ದವರು. ಚಿರಂತನ, ಸ್ಫೂರ್ತಿ, ವನಿತಾ ಸಮಾಜ ಬಿಟ್ಟು ಹೋಗಲು ಸಾಧ್ಯವಿಲ್ಲ. ಎಲ್ಲರಲ್ಲೂ ಅವರನ್ನು ಕಾಣಬಹುದು. ಅವರವರ ಸಾಮರ್ಥ್ಯ, ಸ್ವಭಾವಕ್ಕೆ ತಕ್ಕಂತೆ ನಡೆಸಿಕೊಂಡಿದ್ದರು. ಎಲ್ಲಾ ಮಹಿಳೆಯರ ಏಳಿಗೆಯನ್ನು ಬಯಸಿದ ಅಪರೂಪದ ವ್ಯಕ್ತಿತ್ವ ನಾಗಮ್ಮನವರದ್ದಾಗಿತ್ತು ಎಂದು ಹೇಳಿದರು.

ನಾಗಮ್ಮ ಕೇಶವಮೂರ್ತಿ ಅವರ ಸಂಪರ್ಕಕ್ಕೆ ಬಂದವರಾರೂ ಕೂಡ ದೂರ ಉಳಿದಿಲ್ಲ. ಸಮಾಜಕ್ಕೆ ಏನಾದರೂ ಕೊಡುಗೆಯಾಗಿ ನೀಡಬೇಕೆಂಬ ತುಡಿತ ಹೆಚ್ಚಾಗುತ್ತಿತ್ತು. ಅವರ ನೆನಪನ್ನು ಹಚ್ಚ ಹಸಿರಾಗಿ ಇಟ್ಟುಕೊಳ್ಳುವಂತಾಗಲಿ ಎಂದು ಆಶಿಸಿದರು.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಮಾತನಾಡಿ, ಮಹಿಳಾ ಸೈನ್ಯ ಸಂಪಾದನೆ ಮಾಡಿದ ನಾಗಮ್ಮ ಅವರದು ಸಾರ್ಥಕ ಬದುಕು, ತುಂಬು ಜೀವನ. ಮಹಿಳಾ ಶಕ್ತಿಯಾಗಿದ್ದರು. ಗುಣಗ್ರಾಹಿ ಸ್ವಭಾವದವರು ಎಂದು ಗುಣಗಾನ ಮಾಡಿದರು.

ರಾಜಕಾರಣ, ಸಾಮಾಜಿಕ, ಅಧ್ಯಾತ್ಮ, ಶಿಕ್ಷಣ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ನಾಗಮ್ಮ ಅವರದು ಮೌಲ್ಯಾಧರಿತ ರಾಜಕಾರಣ, ಮಹಿಳಾ ಪಕ್ಷಪಾತಿ. ಅವರು ಶಿಕ್ಷಣ ಸಚಿವರಾಗಿದ್ದ ಸಂದರ್ಭದಲ್ಲಿ ಶೇ. 50 ರಷ್ಟು ಮಹಿಳಾ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಮೂಲಕ ಮಹಿಳಾ ಮೀಸಲಾತಿಗೆ ಒತ್ತು ಕೊಟ್ಟಿದ್ದರು ಎಂದು ಹೇಳಿದರು.

ವನಿತಾ ಸಮಾಜವೇ ಒಂದು ಜೇನುಗೂಡು ಇದ್ದಂತೆ. ನಾಗಮ್ಮ ಅವರು ರಾಣಿ ಜೇನು ಇದ್ದಂತೆ. ಮೂವತ್ತಕ್ಕೂ ಹೆಚ್ಚು ಅಂಗ ಸಂಸ್ಥೆಗಳನ್ನು ತೆರೆದು ಅವುಗಳಿಗೆ ಸೂಕ್ತ ವ್ಯಕ್ತಿಗಳನ್ನೇ ಪದಾಧಿಕಾರಿಗಳನ್ನಾಗಿ ನೇಮಕ ಮಾಡಿ ಮಹಿಳೆಯರ ಸಬಲೀಕರಣಕ್ಕೆ ಮುಂದಾಗಿದ್ದರು ಎಂದರು.

ಶೈಕ್ಷಣಿಕ ಸಲಹೆಗಾರ ಮತ್ತು ತರಬೇತುದಾರ ಜಗನ್ನಾಥ ನಾಡಿಗೇರ್ ಮಾತನಾಡಿ, ನಾಗಮ್ಮ ಅವರಿಗೆ ಮಾನವೀಯ ಸ್ಪರ್ಶ ಪ್ರತಿ ಹಂತದಲ್ಲೂ ಇತ್ತು. ಅವರಲ್ಲಿದ್ದ ಅಚ್ಚುಕಟ್ಟುತನ, ಸಂತಸದ ಜೀವನ. ಜೀವನದ ಮುನ್ನೋಟ ಬಹು ದೊಡ್ಡದಾಗಿತ್ತು ಎಂದು ಹೇಳಿದರು.

ನಾಗಮ್ಮ ಅವರದು ಬರೀ ನೆನಪಲ್ಲ ಅದೊಂದು ಕೃತಜ್ಞತೆ. ಅವರು ಮಾಡಿದ ಕೆಲಸ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗಬೇಕಾಗಿದೆ. ಅವರು ನಮ್ಮ ಜೊತೆಯಲ್ಲಿ ಅವರ ಕೆಲಸದ ಮೂಲಕ ಶಾಶ್ವತವಾಗಿ ಉಳಿದಿದ್ದಾರೆ ಎಂದರು.

ಸಂಗೀತಾ ರಾಘವೇಂದ್ರ, ವಿದ್ಯಾ ಹೆಗಡೆ ಮತ್ತು ಸಂಗಡಿಗರು ಭಜನೆ ನೆರವೇರಿಸಿಕೊಟ್ಟರು. ಈಶ್ವರಮ್ಮ ಟ್ರಸ್ಟ್ ಅಧ್ಯಕ್ಷೆ ಉಷಾ ರಂಗನಾಥ್ ಸ್ವಾಗತಿಸಿ, ಅತಿಥಿಗಳನ್ನು ಪರಿಚಯಿಸಿದರು. ವನಿತಾ ಸಮಾಜದ ಅಧ್ಯಕ್ಷೆ ಪದ್ಮಾ ಪ್ರಕಾಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯದರ್ಶಿ ಸುಷ್ಮಾ ಮೋಹನ್ ಮಾತಾಜಿಯವರನ್ನು ಪರಿಚಯಿಸಿದರು. ಡಾ. ಅನುರಾಧ ಬಕ್ಕಪ್ಪ ನಿರೂಪಿಸಿದರು. ನಳಿನಿ ಅಚ್ಯುತ್ ವಂದಿಸಿದರು.

# ಬೇರೆಯವರ ಒತ್ತಡಕ್ಕೆ ಮಣಿದು ತಪ್ಪು ಮಾಡದಿರಿ

**(1ನೇ ಪುಟದಿಂದ)** ತೆಗೆದುಕೊಳ್ಳದೇ ಶಾಲಾ ಕೊಠಡಿಗಳನ್ನು ಕೆಡವಲು ಮುಂದಾಗಿದ್ದನ್ನು ಪ್ರಸ್ತಾಪಿಸಿದ ಹರೀಶ್ ಅವರು ಸ್ಥಳೀಯ ಅಧಿಕಾರಿಗಳು ದೊಡ್ಡವರ ಮಾತು ಕೇಳಿ ತಪ್ಪು ಮಾಡಿದರೆ ಅದರಿಂದ ನಿಮಗೆ ತೊಂದರೆ ಆದರೆ ನಿಮ್ಮ ಸಹಾಯಕ್ಕೆ ಅವರು ಬರೋದಿಲ್ಲ ಎಂದು ಅಧಿಕಾರಿಗಳಿಗೆ ಕಿವಿಮಾತು ಹೇಳಿದರು. ಜನಸ್ಪಂದನ ಕಾರ್ಯಕ್ರಮದ ಉದ್ದೇಶವನ್ನು ಅಧಿಕಾರಿಗಳು ಅರ್ಥ ಮಾಡಿಕೊಂಡು ಕಾರ್ಯಗತಗೊಳಿಸಬೇಕು.

ರೈತರ ಪಹಣಿ ಕೆಲಸ, ಹೊಲಗಳ ಸರ್ವೆ ಕೆಲಸಗಳಿಗೆ ಆದ್ಯತೆ ಕೊಡಿ. ಉದ್ಯೋಗ ಖಾತ್ರಿ ಮೂಲಕ ಸಿಸಿ ರಸ್ತೆ, ಸಿಸಿ ಚರಂಡಿ ನಿರ್ಮಾಣಕ್ಕೆ ಅವಕಾಶ ಸಿಗಬೇಕು. ಆರೋಗ್ಯ ಇಲಾಖೆಯವರು ಗ್ರಾ.ಪಂ. ಹಾಗೂ ಆಶಾ ಕಾರ್ಯಕರ್ತೆಯರ ಮೂಲಕ ಸ್ವಚ್ಛತೆ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸವನ್ನು ಹೆಚ್ಚಿಸಬೇಕು.

ಸ್ವಚ್ಛತೆ ಇದ್ದರೆ ಸೊಳ್ಳೆ ಇರಲ್ಲ. ಆಗ ಡೆಂಗ್ಯೂ, ಮಲೇರಿಯಾದಂತಹ ರೋಗಗಳನ್ನು ತಡೆಗಟ್ಟಬಹುದೆಂದ ಶಾಸಕ ಹರೀಶ್ ಅವರು, ಈ ಸಭೆಯಲ್ಲಿ ಬಂದಿರುವ ಅರ್ಜಿಗಳನ್ನು ಸಾಧ್ಯವಾದರೆ ಸ್ಥಳದಲ್ಲಿ ಪರಿಹಾರ ನೀಡಿ, ಇಲ್ಲದಿದ್ದರೆ ವಾರದೊಳಗೆ ಬಗೆಹರಿಸಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪ್ರಾಸ್ತಾವಿಕ ಮಾತನಾಡಿದ ತಹಶೀಲ್ದಾರ್ ಗುರುಬಸವರಾಜ್ ಅವರು, ಜನಸ್ಪಂದನ ಕಾರ್ಯಕ್ರಮದ ಉದ್ದೇಶ ತಿಳಿಸಿ, ಪ್ರತಿ ತಿಂಗಳ ನಾಲ್ಕನೇ ಶನಿವಾರ ಈ ಸಭೆಯನ್ನು ಪ್ರತಿ ಗ್ರಾ.ಪಂ.ನಲ್ಲೂ ಆಚರಿಸಲಾಗುವುದೆಂದರು.

ತಾ.ಪಂ. ಇಓ ರಾಮಕೃಷ್ಣ ಮಾತನಾಡಿ, 6 ತಿಂಗಳಿಂದ 3 ವರ್ಷದವರೆಗಿನ ಮಕ್ಕಳ ಪೋಷಣೆ ಮಾಡುವ ಕೂಸಿನ ಮನೆಯನ್ನು ಪ್ರತಿ ಗ್ರಾ.ಪಂ. ಮಟ್ಟದಲ್ಲಿ ಆರಂಭಿಸಿದ್ದೇವೆ. ಬಡವರು, ಉದ್ಯೋಗ ಖಾತ್ರಿ ಕೆಲಸಕ್ಕೆ ಹೋಗುವ ಮಹಿಳೆಯರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದರು.

ಟಿ.ಹೆಚ್.ಓ. ಡಾ. ಖಾದರ್, ಬಿಇಓ ಹನುಮಂತಪ್ಪ, ಸಹಾಯಕ ಕೃಷಿ ನಿರ್ದೇಶಕ ಎ. ನಾರನಗೌಡ, ಸಿಪಿಐ ಸುರೇಶ್ ಸಗರಿ, ಸಿಡಿಪಿಓ ಪೂರ್ಣಿಮಾ ಅವರುಗಳು ತಮ್ಮ ಇಲಾಖೆಗಳ ಮಾಹಿತಿ ನೀಡಿದರು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಯಲ್ಲಮ್ಮ, ಉಪಾಧ್ಯಕ್ಷೆ ಶ್ರೀಮತಿ ರುದ್ರಮ್ಮ, ಗ್ರಾಮದ ಮುಖಂಡರಾದ ಡಿ. ಯೋಮಕೇಶ್ವರಪ್ಪ, ಜಿ. ಆಂಜನೇಯ, ಡಿ.ಹೆಚ್. ಚನ್ನಬಸಪ್ಪ, ಡಿ.ಹೆಚ್. ಮಹೇಂದ್ರಪ್ಪ, ಎ. ರಾಮಚಂದ್ರಪ್ಪ, ಜಯನಾಯ್ಕ, ಬಿ. ಸಿದ್ದೇಶ್, ಪಿಎಸ್ಐ ಪ್ರಭು ಕೆಳಗಿನಮನಿ, ಎಎಸ್ಐ ಮಲ್ಲಿಕಾರ್ಜುನ್, ವೈದ್ಯಾಧಿಕಾರಿ ಡಾ. ಚೇತನ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ, ಭದ್ರಾ ಎಇಇ ಧನಂಜಯ, ಜಿ.ಪಂ. ಎಇಇ ಗಿರೀಶ್, ಎಡಿಎಲ್‌ಆರ್ ನಾಗಭೂಷಣ್, ವಿಜಯಪ್ರಕಾಶ್, ಪಿಡಿಓ ಮಹೇಶ್, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿಗಳಾದ ಷರೀಫ್, ಬೋರಯ್ಯ, ಆನಂದತೀರ್ಥ, ಸೌಮ್ಯ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು. ಉಪ ತಹಶೀಲ್ದಾರ್ ಆರ್ಯ ರವಿ ಸ್ವಾಗತಿಸಿದರು.

> **ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ 13 ತಿಂಗಳು ಪೂರೈಸಿದ್ದು, ಬರೀ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವ ಕೆಲಸ ಮಾತ್ರ ನಡೆಯುತ್ತಿದೆ. ಅಭಿವೃದ್ಧಿ ಸಂಪೂರ್ಣ ಕುಂಠಿತಗೊಂಡಿದೆ. ಅನುದಾನದ ಕೊರತೆಯಿಂದಾಗಿ ನಾವು ಜನರ ನಿರೀಕ್ಷೆಗಳಂತೆ ಅಭಿವೃದ್ಧಿ ಕೆಲಸ ಮಾಡಲು ಆಗುತ್ತಿಲ್ಲ ಎಂಬ ಬೇಸರ ಇದೆ. ರಾಜ್ಯದಲ್ಲಿ ಉತ್ತಮ ಮಳೆ ಇಲ್ಲ, ಬೆಳೆ ಇಲ್ಲ. ಜೊತೆಗೆ ಅಭಿವೃದ್ಧಿಯೂ ಇಲ್ಲದಂತಾಗಿ ಜನ ತುಂಬಾ ಬೇಸರದಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಅಧಿಕಾರಿಗಳು ಜನರನ್ನು ಸಣ್ಣ-ಪುಟ್ಟ ಕೆಲಸಗಳಿಗಾಗಿ ಅಲೆದಾಡಿಸದೇ ಪ್ರೀತಿಯಿಂದ ಮಾತನಾಡಿಸಿ ತಕ್ಷಣ ಅವರ ಕೆಲಸ ಮಾಡಿಕೊಟ್ಟರೆ ಜನ ಸ್ವಲ್ಪ ಸಮಾಧಾನಗೊಳ್ಳುತ್ತಾರೆ.**
>
> **- ಬಿ.ಪಿ. ಹರೀಶ್, ಶಾಸಕರು**

## ಟಿಇಟಿ ಪರೀಕ್ಷೆ : 9548 ಅಭ್ಯರ್ಥಿಗಳು ಹಾಜರು

ದಾವಣಗೆರೆ, ಜೂ.30- ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆ ಟಿಇಟಿ ಭಾನುವಾರ ರಾಜ್ಯಾದ್ಯಂತ ನಡೆದಿದೆ. ದಾವಣಗೆರೆಯ 19 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿದ್ದು ಎರಡು ಅಧಿವೇಶನಗಳಿಂದ ಒಟ್ಟು 9548 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಬೆಳಿಗ್ಗೆ ನಡೆದ ಮೊದಲ ಅಧಿವೇಶನ 3805 ಅಭ್ಯರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿದ್ದು, ಇವರ ಪೈಕಿ 3422 ವಿದ್ಯಾರ್ಥಿಗಳು ಹಾಜರಾಗಿದ್ದಾರೆ. 383 ಗೈರು ಹಾಜರಾಗಿದ್ದಾರೆ. ಎರಡನೇ ಅಧಿವೇಶನ ಹೆಸರು ನೋಂದಾ ಯಿಸಿಕೊಂಡಿದ್ದ 6126 ಜನರ ಪೈಕಿ 5690 ಜನರು ಹಾಜರಾಗಿ 436 ಅಭ್ಯರ್ಥಿಗಳು ಗೈರು ಹಾಜ ರಾಗಿದ್ದಾರೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಕೊಟ್ರೇಶ್.ಜಿ ತಿಳಿಸಿದ್ದಾರೆ.

## ಮೀಸಲಾತಿ ಶೇ.50 ದಾಟಿಸಲು ಕಾಯ್ದೆ

**(1ನೇ ಪುಟದಿಂದ)** ಜೆಡಿಯು ಸಭೆಯಲ್ಲಿ ತೆಗೆದುಕೊಳ್ಳಲಾದ ರಾಜಕೀಯ ನಿರ್ಣಯದಲ್ಲಿ ಆಗ್ರಹಿಸಲಾಗಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 1994ರಲ್ಲಿ ತಮಿಳುನಾಡು ಮೀಸಲಾತಿಯನ್ನು 9ನೇ ಪರಿಚ್ಛೇದದಲ್ಲಿ ಸೇರ್ಪಡೆ ಮಾಡಲಾಗಿತ್ತು.

ಅದೇ ರೀತಿ ಎಲ್ಲಾ ರಾಜ್ಯಗಳ ಕಾಯ್ದೆಗಳನ್ನು 9ನೇ ಪರಿಚ್ಛೇದದಲ್ಲಿ ಸೇರ್ಪಡೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ಮೀಸಲಾತಿಯನ್ನು ಶೇ.50ಕ್ಕಿಂತ ಜಾಸ್ತಿ ಹೆಚ್ಚಿಸಲು ಅವಕಾಶ ನೀಡಲು ಸಂವಿಧಾನಕ್ಕೆ ತಿದ್ದುಪಡಿ ತರಬೇಕು ಎಂದೂ ಅವರು ಆಗ್ರಹಿಸಿದ್ದಾರೆ.

## ಭದ್ರಾ ಮೇಲ್ದಂಡೆ ಚುರುಕಿಗೆ ಸೂಚನೆ

**(1ನೇ ಪುಟದಿಂದ)** ಗಮನಕ್ಕೆ ತಂದರೆ ಸರ್ಕಾರದೊಂದಿಗೆ ಮಾತುಕತೆ ನಡೆಸಲಾಗುವುದೆಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿಶ್ವೇಶ್ವರಯ್ಯ ಜಲನಿಗಮದ ಅಧಿಕಾರಿ ವರ್ಗದವರು, ಇಂಜಿನಿಯರ್ ಗಳು ಉಪಸ್ಥಿತರಿದ್ದರು.

## ಗೆಲುವಿನ 'ರುಚಿ ಸವಿದ' ಶರ್ಮ



ಬ್ರಿಡ್ಜ್‌ಟೌನ್, ಜೂ. 30 - ಟಿ20 ವಿಶ್ವಕಪ್ ಗೆಲುವು ಭಾರತೀಯ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಗೆ ಅಪಾರ ಆನಂದ ನೀಡಿತ್ತು. ಈ ಆನಂದದ ನಡುವೆ ಅವರು ಗೆಲುವು ನೀಡಿದ ಕ್ರೀಡಾಂಗಣದ ಮಣ್ಣಿನ ರುಚಿಯನ್ನೂ ಸವಿದರು!

ಪಂದ್ಯ ಗೆದ್ದ ಸಂಭ್ರಮಾಚರಣೆಯ ಕೊನೆಯ ಹಂತದಲ್ಲಿ ಕೀನ್ಸಿಂಗ್ಟನ್ ಓವಲ್ ಪಿಚ್‌ನಲ್ಲಿ ಬಾಗಿದ ಶರ್ಮ, ಸ್ವಲ್ಪ ಮಣ್ಣನ್ನು ಹಿಡಿದು ನಾಲಿಗೆಯಿಂದ ರುಚಿ ನೋಡಿದರು. ಕ್ರಿಕೆಟ್‌ನಲ್ಲಿ ಈ ಪದ್ಧತಿ ಹೊಸದಿರಬಹುದು. ಆದರೆ, ಟೆನ್ನಿಸ್ ದಿಗ್ಗಜ ನೊವಾಕ್ ಜೊಕೊವಿಕ್ ಅವರು ಟೆನ್ನಿಸ್ ಅಂಗಳದಲ್ಲಿ ಒಂದೆರಡು ಹುಲ್ಲಿನ ಎಳೆ ಕಿತ್ತು ರುಚಿ ನೋಡುವ ಪದ್ಧತಿ ಹೊಂದಿದ್ದಾರೆ. ವಿಂಬಲ್ಡನ್‌ನ ಅಧಿಕೃತ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಜೊಕೊವಿಕ್ ಹಾಗೂ ರೋಹಿತ್ ಅವರು ಗೆಲುವಿನ ರುಚಿ ಸವಿಯುವ ಚಿತ್ರ ಹಂಚಿಕೊಳ್ಳಲಾಗಿದೆ.

## ಮಹಿಳಾ ಸಮಾಜ ಪ್ರೌಢಶಾಲೆ ಪ್ರಥಮ



ದಾವಣಗೆರೆ, ಜೂ. 30 - ನಾಡಪ್ರಭು ಕೆಂಪೇಗೌಡರ ಜಯಂತ್ಯೋತ್ಸವದ ಅಂಗವಾಗಿ ನಡೆದ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆ ಮತ್ತು ಭಾಷಣ ಸ್ಪರ್ಧೆಯಲ್ಲಿ ಮಹಿಳಾ ಸೇವಾ ಸಮಾಜದ ಪ್ರೌಢಶಾಲೆಯ ವಿದ್ಯಾರ್ಥಿನಿ ಎಂ. ದಿವ್ಯ ಮತ್ತು ಎಸ್. ಪ್ರಾರ್ಥನಾ ಪ್ರಥಮ ಸ್ಥಾನ ಪಡೆದಿದ್ದಾರೆ. ಬಹುಮಾನಗಳನ್ನು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ವಿತರಿಸಿದರು.

## ಓದುಗರ ಪತ್ರ

### ಎಲ್ಲೆಂದರಲ್ಲಿ ಕಸ ಮುಸರೆ ಎಸೆಯುವುದನ್ನು ತಡೆಯಿರಿ

**ಮಾನ್ಯರೇ,**

ನಗರದ ಪ್ರಮುಖ ಬಡಾವಣೆಗಳಲ್ಲಿ ಒಂದಾದ ಆಂಜನೇಯ ಬಡಾವಣೆಯ ಟ್ಯಾಂಕ್ ಪಾರ್ಕನ್ನು ಮಾದರಿ ಉದ್ಯಾನವನ ಮಾಡಬೇಕೆಂಬ ಹಂಬಲ ಇಲ್ಲಿನ ವಾಸಿಗಳದ್ದಾಗಿದೆ ಆದರೆ, ಇತ್ತೀಚಿನ ದಿನಗಳಲ್ಲಿ ಈ ಪಾರ್ಕಿನ ಸುತ್ತಲೂ ತಡರಾತ್ರಿ ಮತ್ತು ಬೆಳಗಿನ ಜಾವ ಕೆಲವು ಮನೆಯವರು ಮತ್ತು ಪಿಜಿ ಹಾಗೂ ಹಾಸ್ಟೆಲ್‌ನಿಂದ ತಿಂದು ಉಳಿದ ಪದಾರ್ಥವನ್ನು ಎಲ್ಲೆಂದರಲ್ಲಿ ಹಾಕುತ್ತಿದ್ದಾರೆ.

ಬೀದಿ ನಾಯಿಗಳು ಇವನ್ನು ಎಳೆದು, ಚೆಲ್ಲಾಡಿ ಪಾರ್ಕಿನ ಸುತ್ತಲೂ ಗಲೀಜು ಮಾಡುವ ಜತೆಗೆ ಪಾರ್ಕಿಗೆ ಅಂಟಿಕೊಂಡ ರಸ್ತೆಯಲ್ಲಿ ಕಸ-ಮುಸರಿ ಹರಡುವ ಮೂಲಕ ಪ್ರಕೃತಿ ಸ್ವಾಸ್ಥ್ಯ ಹಾಳು ಮಾಡುತ್ತಿವೆ.

ಈ ದುಸ್ಥಿತಿಯಿಂದ ಸ್ಥಳೀಯ ಜನರು, ಸಾಂಕ್ರಾಮಿಕ ರೋಗ ಹರಡುವ ಭೀತಿಯಿಂದ ಮುಖ, ಬಾಯಿ ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಈ ಕೂಡಲೇ ಪಾಲಿಕೆಯ ಆಯುಕ್ತರು, ಆರೋಗ್ಯಾಧಿಕಾರಿಗಳು ಇತ್ತ ಗಮನ ಹರಿಸಿ ಕಸ ಎಸೆಯುವವರ ಮೇಲೆ ದಂಡ ವಿಧಿಸಿ ಮತ್ತು ಬೀದಿ ನಾಯಿಯ ಹಾವಳಿಯಿಂದ ಸ್ಥಳೀಯರನ್ನು ರಕ್ಷಿಸಿ.

**- ಶಂಕರ ರಾವ್**
ಆಂಜನೇಯ ಬಡಾವಣೆ, 8ನೇ ಕ್ರಾಸ್. ದಾವಣಗೆರೆ.

### ಗ್ರಾಮದ ಶುಚಿತ್ವಕ್ಕೆ ಹೆಚ್ಚಿನ ಆದ್ಯತೆ ನೀಡಿ

**ಮಾನ್ಯರೇ,**

ಗ್ರಾಮದ ಶುಚಿತ್ವಕ್ಕೆ ಆದ್ಯತೆ ನೀಡುವಲ್ಲಿ ಕೆಲವು ಗ್ರಾಮ ಪಂಚಾಯಿತಿಗಳು ಅಸಡ್ಡೆ ತೋರುತ್ತಿವೆ. ಶುಚಿತ್ವಕ್ಕೆ ಆದ್ಯತೆ ನೀಡದ ಗ್ರಾಮ ಪಂಚಾಯಿತಿ ವಿರುದ್ಧ ಸರ್ಕಾರ ಕಟ್ಟು ನಿಟ್ಟಿನ ಕ್ರಮ ಜರುಗಿಸಬೇಕು.

ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ನಿರ್ಲಕ್ಷ್ಯ ಆಡಳಿತ ಮಾಡುತ್ತಿರುವ ಪರಿಣಾಮ ಹಲವು ಗ್ರಾಮಗಳಲ್ಲಿನ ಚರಂಡಿಗಳು ವರ್ಷಕ್ಕೆ 2 ಬಾರಿ ಶುಚಿತ್ವಗೊಳ್ಳುತ್ತಿರುವುದು ಬೇಸರದ ಸಂಗತಿ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡುತ್ತಿದ್ದೇನೆ.

**- ಎಸ್.ಎಚ್. ಷಣ್ಮುಖ, ಹಳೇಬಾತಿ.**

## ಪ್ರಜಾಪ್ರಭುತ್ವಕ್ಕೆ ಜನರ ಬದ್ಧತೆ

**(1ನೇ ಪುಟದಿಂದ)** ನಂತರ ನಡೆದ ಮೊದಲ ಮನ್ ಕಿ ಬಾತ್ ಕಾರ್ಯಕ್ರಮ ಇದಾಗಿದೆ. 2024ರ ಲೋಕಸಭಾ ಚುನಾವಣೆ ವಿಶ್ವದಲ್ಲೇ ಅತಿ ದೊಡ್ಡ ಚುನಾವಣೆಯಾಗಿತ್ತು. 65 ಕೋಟಿಗೂ ಹೆಚ್ಚು ಜನ ಚುನಾವಣೆಯಲ್ಲಿ ಭಾಗಿಯಾಗಿದ್ದರು ಎಂದವರು ಹೇಳಿದರು.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಜನರು ಸಸಿಗಳನ್ನು ನೆಡುವಂತೆ ಕರೆ ನೀಡಿರುವ ಪ್ರಧಾನಿ, ಏಕ್ ಪೇಡ್ ಮಾ ಕೆ ನಾಮ್ (ತಾಯಿಯ ಹೆಸರಿನಲ್ಲಿ ಒಂದು ಗಿಡ) ಅಭಿಯಾನಕ್ಕೆ ಕರೆ ನೀಡಿದ್ದಾರೆ.

## 125 ಕೋಟಿ ರೂ. ಬಹುಮಾನ

**(1ನೇ ಪುಟದಿಂದ)** ಚಾಂಪಿಯನ್ ಆಗಿದೆ ಎಂದು ಬಿ.ಸಿ.ಸಿ.ಐ. ತಿಳಿಸಿದೆ.

ಭಾರತೀಯ ಪುರುಷರ ತಂಡಕ್ಕೆ 125 ಕೋಟಿ ರೂ.ಗಳ ಬಹುಮಾನ ಘೋಷಿಸಲು ಹರ್ಷವಾಗುತ್ತಿದೆ ಎಂದು ಜಯ್ ಷಾ ತಿಳಿಸಿದ್ದಾರೆ.

## ನಗರಕ್ಕೆ ನಾಡಿದ್ದು ಮೂಳೆ ವೈದ್ಯರ ಭೇಟಿ

ದಾವಣಗೆರೆ, ಜೂ. 30- ರಾಮನಗರ ಜಿಲ್ಲೆಯ ಕುದೂರಿನ ಪಾರಂಪರಿಕ ಮೂಳೆಯ ವೈದ್ಯ ಮಹದೇವಯ್ಯ ಅವರು ನಾಡಿದ್ದು ದಿನಾಂಕ 3ರಂದು ನಗರಕ್ಕೆ ಆಗಮಿಸಲಿದ್ದು, ನಿಟುವಳ್ಳಿಯಲ್ಲಿರುವ ಪತಂಜಲಿ ವೆಲ್‌ನೆಸ್ ಸೆಂಟರ್‌ನಲ್ಲಿ ಚಿಕಿತ್ಸೆ ನೀಡಲಿದ್ದಾರೆ ಎಂದು ಕೆ.ಎಂ. ಪುಷ್ಪಲತಾ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9743895325, 9880107918, 9964829122, 8310748946.

## ಗೃಹಲಕ್ಷ್ಮಿ ಯೋಜನೆ ಸ್ಥಗಿತ ಇಲ್ಲ

**(1ನೇ ಪುಟದಿಂದ)** ಸೂಚಿಸಿದರು. ಆನಗೋಡು ಗ್ರಾಮದಲ್ಲಿ ಲಿಡ್ಕರ್ ವಸತಿ ನಿರ್ಮಾಣಕ್ಕೆ ಮೀಸಲಿಟ್ಟಿರುವ ಜಾಗ ಕೆಲವು ತಾಂತ್ರಿಕ ತೊಂದರೆಯಿಂದ ವಸತಿ ನಿರ್ಮಿಸಲು ಆಗಿಲ್ಲ. ಕೂಡಲೇ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರ್ ಅವರೊಂದಿಗೆ ಚರ್ಚಿಸಿ ಲಿಡ್ಕರ್ ವಸತಿಗಳನ್ನು ನಿರ್ಮಾಣ ಮಾಡಲು ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು.

ಕ್ಷೇತ್ರದ ವ್ಯಾಪ್ತಿಯಲ್ಲಿ ನಕಾಸೆ ದಾರಿ ಒತ್ತುವರಿ ಪ್ರಕರಣಗಳು ಸಾಕಷ್ಟು ಬರುತ್ತಿವೆ. ಕೂಡಲೇ ನಕಾಸೆ ದಾರಿ ಒತ್ತುವರಿ ತೆರವುಗೊಳಿಸಿ ನಕಾಸೆ ದಾರಿ ಒತ್ತುವರಿ ಮುಕ್ತ ಕ್ಷೇತ್ರ ಮಾಡಬೇಕೆಂದು ನಿರ್ಧಾರ ಮಾಡಲಾಗಿದೆ. ಈ ನಿಟ್ಟಿನಲ್ಲಿ ತಹಶೀಲ್ದಾರ್, ಸಂಬಂಧಪಟ್ಟ ಅಧಿಕಾರಿಗಳು ತ್ವರಿತ ಕೆಲಸ ಮಾಡಬೇಕೆಂದು ಸೂಚನೆ ನೀಡಿದರು.

ಗ್ರಾಮ ಪಂಚಾಯತಿ ಅಧ್ಯಕ್ಷೆ ಚಂದ್ರಮ್ಮ, ಉಪಾಧ್ಯಕ್ಷ ಬಸವರಾಜ್, ಸದಸ್ಯ ಕರಿಬಸಪ್ಪ, ತಹಸೀಲ್ದಾರ್ ಡಾ.ಎಂ.ಬಿ.ಅಶ್ವತ್ಥ್, ತಾಲ್ಲೂಕು ಪಂಚಾಯತಿ ಇಒ ರಾಮಭೋವಿ, ಉಪ ತಹಸೀಲ್ದಾರ್ ರಾಮಸ್ವಾಮಿ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಎನ್.ಜಯದೇವನಾಯ್ಕ ನೇಮಕ ಕಾಂಗ್ರೆಸ್ ಕಾನೂನು ಘಟಕದ ಹರ್ಷ

ದಾವಣಗೆರೆ, ಜೂ. 30- ಹಿರಿಯ ವಕೀಲ ಎನ್. ಜಯದೇವನಾಯ್ಕ ಅವರನ್ನು ರಾಜ್ಯ ಸರ್ಕಾರವು ಲಂಬಾಣಿ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದಕ್ಕೆ ಜಿಲ್ಲಾ ಕಾಂಗ್ರೆಸ್ ಕಾನೂನು ಘಟಕ ಹರ್ಷ ವ್ಯಕ್ತಪಡಿಸಿದೆ ಎಂದು ಪ್ರಕಾಶ್ ಪಾಟೀಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಸರ್ಕಾರದ ವಿವಿಧ ನಿಗಮ ಮಂಡಳಿಗಳಲ್ಲಿ ಪಕ್ಷದ ನಿಷ್ಠಾವಂತ ವಕೀಲರುಗಳಿಗೆ ಆದ್ಯತೆ ನೀಡಬೇಕೆಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಕಾನೂನು ಘಟಕದ ಪದಾಧಿಕಾರಿಗಳಾದ ಎಂ.ನಾಗೇಂದ್ರಪ್ಪ, ಎನ್.ಎಂ. ಆಂಜನೇಯ, ಸೈಯದ್ ಖಾದರ್, ಕಂಚಿಕೆರೆ ಮಂಜಪ್ಪ, ಆನಂದ್, ಪ್ರದೀಪ್ ಲೋಕಿಕೆರೆ, ಕೃಷ್ಣಾನಾಯ್ಕ ಉಪಸ್ಥಿತರಿದ್ದರು.






## ಹೊನ್ನಾಳಿ : ಕಾಣೆಯಾದ ವ್ಯಕ್ತಿ ಶವವಾಗಿ ಪತ್ತೆ



ಹೊನ್ನಾಳಿ, ಜೂ.30- ತಾಲ್ಲೂಕಿನ ಅರಕೆರೆ ಎ.ಕೆ.ಕಾಲೋನಿಯ ಹತ್ತಿರದ ಕಾಡಿನಂತಿರುವ ಪ್ರದೇಶದಲ್ಲಿ ಇಂದು ಸಂಜೆ ಮರಕ್ಕೆ ನೇಣು ಹಾಕಿದ ಸ್ಥಿತಿಯಲ್ಲಿ ವ್ಯಕ್ತಿಯೊಬ್ಬನ ಶವ ಪತ್ತೆಯಾಗಿರುವ ಘಟನೆ ಹೊನ್ನಾಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಹೊನ್ನಾಳಿ ಮತ್ತು ಮಲೇಬೆನ್ನೂರು ಗಡಿ ಭಾಗದಲ್ಲಿರುವ ಈ ಪ್ರದೇಶದಲ್ಲಿ ಇಂದು ಕುರಿಕಾಯುವವರಿಂದ ಈ ಘಟನೆ ತಿಳಿದು ಬಂದಿದೆ.

**ದೂರು ದಾಖಲು :** ತಾಲ್ಲೂಕಿನ ಬೆನಕನಹಳ್ಳಿ ಗ್ರಾಮದಿಂದ ಜೂನ್ 28 ರಂದು ರವಿಕುಮಾರ ಎಂಬ 30 ವರ್ಷದ ಲೈನ್‌ಮನ್ ಜೂನ್ 25 ರಿಂದ ಕಾಣೆಯಾಗಿದ್ದಾರೆ ಎಂದು ತಂದೆ ನರಸಿಂಹಪ್ಪ ಅವರು ದೂರು ಸಲ್ಲಿಸಿದ್ದರು.

ಇಂದು ಸಂಜೆ ಅರಕೆರೆ ಎ.ಕೆ.ಕಾಲೋನಿ ಹತ್ತಿರದಲ್ಲಿ ದೊರೆತಿರುವ ಶವವು ಕಾಣೆಯಾದ ವ್ಯಕ್ತಿಯ ಆಕಾರ ಮತ್ತು ವಯಸ್ಸನ್ನು ಹೋಲುತ್ತಿದ್ದು, ನಾಲ್ಕು ದಿನಗಳ ಹಿಂದೆ ನೇಣು ಹಾಕಿರುವ ಸ್ಥಿತಿಯಲ್ಲಿರುವ ಶವ ಸ್ಪಷ್ಟವಾಗಿ ಗುರುತು ಸಿಗದ ಸ್ಥಿತಿಯಲ್ಲಿದ್ದರಿಂದ ತನಿಖೆ ನಡೆಸುತ್ತಿರುವುದಾಗಿ ಪೊಲೀಸ್ ಇನ್‌ಸ್ಪೆಕ್ಟರ್ ಸುನೀಲ್ ಕುಮಾರ್ ತಿಳಿಸಿದ್ದಾರೆ.

ಕಾಣೆಯಾದ ವ್ಯಕ್ತಿ ಕುರುಬ ಜನಾಂಗಕ್ಕೆ ಸೇರಿದವನೆಂದು ತಿಳಿದು ಬಂದಿದೆ.ಇಂದು ದೊರೆತ ಶವವು ರವಿಕುಮಾರ ಎಂಬುವವನದೇ ಎಂದು ತನಿಖೆಯಿಂದ ತಿಳಿದುಬರಬೇಕಿದೆ.

## ಕೇದಾರನಾಥದ ಬಳಿ ಹಿಮಪಾತ

ರುದ್ರಪ್ರಯಾಗ್, ಜೂ. 30 – ಕೇದಾರನಾಥ ಧಾಮದ ನಾಲ್ಕು ಕಿ.ಮೀ. ದೂರದಲ್ಲಿರುವ ಗಾಂಧಿ ಸರೋವರಕ್ಕೆ ಬೃಹತ್ ಹಿಮಪಾತವೊಂದು ಅಪ್ಪಳಿಸಿದೆ. ಆದರೆ, ಯಾವುದೇ ಆಸ್ತಿ ಇಲ್ಲವೇ ಜೀವ ಹಾನಿಯಾಗಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಬೆಳಿಗ್ಗೆ 5 ಗಂಟೆ ಸಮಯದಲ್ಲಿ ಹಿಮಪಾತ ಸಂಭವಿಸಿದೆ. ದೇವಾಲಯಕ್ಕೆ ಭೇಟಿ ನೀಡಿದ್ದ ಭಕ್ತರು ಮೊಬೈಲ್‌ಗಳಲ್ಲಿ ಹಿಮಪಾತದ ದೃಶ್ಯ ಸೆರೆ ಹಿಡಿದಿದ್ದಾರೆ. ಉತ್ತರಾಖಂಡದ ಚಾರ್ ಧಾಮ್ ಯಾತ್ರೆಗೆ ಸಾಕಷ್ಟು ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿದ್ದಾರೆ. ಈ ಸಂದರ್ಭದಲ್ಲೇ ಹಿಮಕುಸಿತ ಸಂಭವಿಸಿದೆ. ದೊಡ್ಡ ಪ್ರಮಾಣದ ಹಿಮ ಬೆಟ್ಟದಿಂದ ಕುಸಿದು ಬೀಳುತ್ತಿರುವ ದೃಶ್ಯವನ್ನು ಮೊಬೈಲ್‌ಗಳಲ್ಲಿ ಸೆರೆ ಹಿಡಿಯಲಾಗಿದೆ.

## ಸಾಣೇಹಳ್ಳಿ : ಪುಸ್ತಕ ಬಿಡುಗಡೆ

ಶಿವನಕೆರೆ ಬಸವಲಿಂಗಪ್ಪ ಅವರ 'ವಚನ ಧರ್ಮದಲ್ಲಿ ನಡೆ-ನುಡಿ ಸಿದ್ಧಾಂತ' ಎಂಬ ಪುಸಕ ಬಿಡುಗಡೆ ಸಮಾರಂಭ ಇಂದು ಬೆಳಿಗ್ಗೆ 10 ಗಂಟೆಗೆ ಸಾಣೇಹಳ್ಳಿಯ ಎಸ್.ಎಸ್. ರಂಗಮಂದಿರದಲ್ಲಿ ನೆರವೇರಲಿದೆ.

ಮುಖ್ಯ ಅತಿಥಿಗಳಾಗಿ ಡಾ. ಬಸವರಾಜ ಸಾದರ ಶರಣ ತತ್ವ ಚಿಂತಕರು, ಬೆಂಗಳೂರು ಆಗಮಿಸುವರು. ಸಾನ್ನಿಧ್ಯವನ್ನು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ನಾಡೋಜ ಡಾ. ಶ್ರೀ ಬಸವ ಲಿಂಗ ಪಟ್ಟದೇವರು, ಹಿರೇಮಠ ಸಂಸ್ಥಾನ ಹಾಗೂ ಶ್ರೀ ಮದ್ ಜಗದ್ಗುರು ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇದ್ರ ಮಹಾ ಸ್ವಾಮೀಜಿ, ಬೆಕ್ಕಿನ ಕಲ್ಮಠ ಆನಂದಪುರ ಸಾನ್ನಿಧ್ಯ ವಹಿಸುವರು.

## ನೈಜೀರಿಯಾದಲ್ಲಿ ಮಹಿಳಾ ಬಾಂಬರ್‌ಗಳ ಆತ್ಮಹತ್ಯಾ ದಾಳಿ : 18 ಸಾವು

ಮೈದುಗುರಿ, ಜೂ. 30 – ನೈಜೀರಿಯಾದ ಗ್ವೊಜಾ ನಗರದಲ್ಲಿ ಶನಿವಾರ ಮಹಿಳಾ ಆತ್ಮಹತ್ಯಾ ಬಾಂಬರ್‌ಗಳು ನಡೆಸಿದ ದಾಳಿಯಲ್ಲಿ 18 ಜನ ಸಾವನ್ನಪ್ಪಿದ್ದಾರೆ ಹಾಗೂ 30 ಜನ ಗಾಯಗೊಂಡಿದ್ದಾರೆ.

ಬುರ್ಕಿಂಡೊ ಸೈದು ಎಂಬಲ್ಲಿನ ಮದುವೆ ಸಮಾರಂಭದಲ್ಲಿ ಮೊದಲ ಆತ್ಮಹತ್ಯಾ ಬಾಂಬರ್ ದಾಳಿ ನಡೆದಿದೆ. ಮಧ್ಯಾಹ್ನ 3 ಗಂಟೆ ಸಮಯದಲ್ಲಿ ದಾಳಿ ನಡೆಸಲಾಗಿದೆ. ಕೆಲ ನಿಮಿಷಗಳ ನಂತರ ಸರ್ಕಾರಿ ಆಸ್ಪತ್ರೆಯಲ್ಲಿ ಮತ್ತೊಂದು ಸ್ಫೋಟ ಸಂಭವಿಸಿದೆ. ನಂತರ ಶೋಕಾಚರಣೆ ಮಾಡುತ್ತಿರುವ ಮಹಿಳೆಯ ಸೋಗಿನಲ್ಲಿ ಬಂದ ಇನ್ನೋರ್ವ ಬಾಂಬರ್ ಸ್ಫೋಟ ನಡೆಸಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ. 2009ರಿಂದಲೂ ಬೊರ್ನೊ ರಾಜ್ಯ ಬೋಕೋ ಹರಾಮ್ ಉಗ್ರರಿಂದ ಪೀಡಿತವಾಗಿದೆ. ಈ ಪ್ರದೇಶದಲ್ಲೇ ಆತ್ಮಹತ್ಯಾ ದಾಳಿಗಳು ನಡೆದಿವೆ. ಲೇಕ್ ಚಾಡ್ ಗಡಿ ಉದ್ದಕ್ಕೂ ನಡೆದಿರುವ ಹಿಂಸಾಚಾರಗಳಲ್ಲಿ 35 ಸಾವಿರಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಹಾಗೂ 26 ಲಕ್ಷ ಜನ ಸ್ಥಳಾಂತರಗೊಂಡಿದ್ದಾರೆ.













KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas